

ಖಾಸಗಿ ಪ್ರಸಾರ

# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 1, ಸಂಚಿಕೆ 4
ಫೆಬ್ರವರಿ 2023

SHRIDEVI ANTARANGA
Monthly Magazine

SHRIDEVI EDUCATION






ಪ್ರಧಾನ ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

# ಹೊಳೆ ಆಲೂರಿನ ಶ್ರೀ ಕಲ್ಮೇಶ್ವರ ವಿವಿಧೋದ್ದೇಶ ಪ್ರೌಢಶಾಲೆಗೆ ಬೇಕು ಕಾಯಕಲ್ಪ

**ಹೊಳೆ ಆಲೂರು ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆ ಊರಿನವರು ಮತ್ತು ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದವರು. ಆರ್ಥಿಕವಾಗಿ ಅತ್ಯಂತ ಹಿಂದುಳಿದ ಕುಟುಂಬದಿಂದ ಬಂದ ಮಕ್ಕಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇಂತಹ ಮಕ್ಕಳಿಗೆ ಶಿಕ್ಷಣ ನೀಡುವ ವಿದ್ಯಾಸಂಸ್ಥೆಯು ಉತ್ತಮ ಪರಿಸರ, ಅಗತ್ಯ ಮೂಲಭೂತ ಸೌಕರ್ಯ, ಸುಸಜ್ಜಿತವಾದ ಕ್ರೀಡಾಂಗಣ, ಕಿರುಸಭಾಂಗಣ, ಬಿಸಿಯೂಟ ಮತ್ತು ಹಾಸ್ಟೆಲ್ ಸೌಲಭ್ಯ ಹೊಂದಿರುವುದು ಅಗತ್ಯವಲ್ಲವೇ? ಇದನ್ನು ನೀಡುವುದು ನಾಗರಿಕ ಸರ್ಕಾರದ ಆದ್ಯ ಕರ್ತವ್ಯವಲ್ಲವೇ?**




ಬಾಗಲಕೋಟೆಯಲ್ಲಿ ಜನವರಿ 19 ಮತ್ತು 20ರಂದು ನಡೆಯಲಿರುವ, ಹುಬ್ಬಳ್ಳಿ ಕೆಎಂಸಿ ಕಾಲೇಜಿನಲ್ಲಿ 1968ರಲ್ಲಿ ಎಂ.ಬಿ.ಬಿ.ಎಸ್. ವ್ಯಾಸಂಗ ಮಾಡಿದ ಸಹಪಾಠಿಗಳ ಸಮಾವೇಶಕ್ಕೆ ಹೋಗಲು ತೀರ್ಮಾನಿಸಿದ್ದೆ. ನಾನು ಸಹ 1968ರ ಎಂ.ಬಿ.ಬಿ.ಎಸ್. ವಿದ್ಯಾರ್ಥಿ. ಮಿತ್ರರಾದ ಡಾ. ಕೆ.ಆರ್.ಕಮಲೇಶ ಮತ್ತು ಎಂ.ಕೆ. ಜಗದೀಶ್ ಅವರು, ತಾವೂ ನನ್ನ ಜೊತೆ ಬರುವುದಾಗಿಯೂ, 'ನೀವು ಓದಿದ ಹೊಳೆ ಆಲೂರಿನ ಪ್ರೌಢಶಾಲೆ ನೋಡಿಬರೋಣ' ಎಂದರು. ನಾನು ಎಂ.ಬಿ.ಬಿ.ಎಸ್‌ಗೆ ಸೇರಿದ ನಂತರ ಆ ಕಡೆ ಹೋದವನಲ್ಲ. ಇನ್ನು ಉದ್ಯೋಗ ನಿಮಿತ್ತ ಈ ಕಡೆ ಬಂದವನು ಆ ಕಡೆ ಹೆಚ್ಚು ಹೋಗುವ ಸಂದರ್ಭ ಬಂದಿರಲಿಲ್ಲ. ನಾನು ಓದಿದ ಪ್ರೌಢಶಾಲೆ ಈಗ ಹೇಗಿರಬಹುದು ಎಂಬ ಕುತೂಹಲವಿತ್ತು. 'ಆಗಲಿ ಹೋಗುವ' ಎಂದೆ. ಎಂ.ಕೆ. ಜಗದೀಶ್ ಅವರೇ ಕಾರ್ಯಕ್ರಮವನ್ನು ನಿಗದಿ ಮಾಡಿದರು.

1962ರಲ್ಲಿ ನಾನಿಲ್ಲಿ ಪ್ರೌಢಶಾಲೆ ಓದುತ್ತಿದ್ದೆ. 1941ರಲ್ಲಿ ಶಿಕ್ಷಣಪ್ರೇಮಿ ಸಂಗನಗೌಡ ಪಾಟೀಲ್ ಮತ್ತು ಮಿತ್ರರು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗಾಗಿ ಈ ಪ್ರೌಢಶಾಲೆಯನ್ನು ಪ್ರಾರಂಭ ಮಾಡಿದ್ದರು. ಆಗ ಅಲ್ಲಿ ಹಾಸ್ಟೆಲ್ ವ್ಯವಸ್ಥೆಯಿತ್ತು. ಯಾವಾಗಲೂ ಹಾಸ್ಟೆಲ್ ಪೂರ್ತಿ ಭರ್ತಿಯಾಗಿರುತ್ತಿತ್ತು.

ಆ ಕಾಲದಲ್ಲಿ ನಮ್ಮನ್ನು ಮೇಷ್ಟ್ರು ಸುಗ್ಗಿ ಸಮಯದಲ್ಲಿ ಗ್ರಾಮಗಳಿಗೆ ಕರೆದುಕೊಂಡು ಹೋಗಿ ವರ್ಷಕ್ಕೆ ಆಗುವಷ್ಟು ಜೋಳ ಹಾಗೂ ಇತರೆ ದಿನಸಿ ಪದಾರ್ಥಗಳನ್ನು ಸಂಗ್ರಹಿಸಿಕೊಂಡು ತರುತ್ತಿದ್ದರು. ಮುಖ್ಯೋಪಾಧ್ಯಾಯರಾದ ಎಂ.ಎಸ್. ಗುಂಜಾಳ, ಪಾಂಚಾಳ, ಶಂಕರ ಪಾಂಡೆ, ಲಿಂಗನಗೌಡ ಹಾಗೂ ಹೆಚ್.ಎಲ್.ಎನ್. ಭಟ್ಟ ಅವರುಗಳು ನನ್ನ ನೆನಪಿಗೆ ಬಂದರು. ಅಲ್ಲಿನ ಯೆಚ್ಚರಸ್ವಾಮಿಮಠ ಮತ್ತು ಮಲಪ್ರಭಾ ನದಿ ದಂಡೆಯ ಮೇಲಿರುವ ಶಿವ ದೇವಾಲಯಗಳು ತಮ್ಮ ಇರುವಿಕೆಯನ್ನು ನೆನಪಿಸಿದವು.

ನಾನು ಮುಲ್ಕಿ ಪರೀಕ್ಷೆಯ ನಂತರ ಜಿಲ್ಲಾ ಮಟ್ಟದಲ್ಲಿ ನಡೆಯುವ ಪ್ರತಿಭಾನ್ವೇಷಣೆಯ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದೆ. ಇಂತಹ ವಿದ್ಯಾರ್ಥಿಗಳು ಪ್ರೌಢಶಾಲೆಯಲ್ಲಿ ಫೀಜು ಕಟ್ಟಬೇಕಾಗಿರಲಿಲ್ಲ. ಅವರಿಗೆ ವಿದ್ಯಾರ್ಥಿವೇತನ ಕೊಡುತ್ತಿದ್ದರು. ಅವಿಭಾಜ್ಯ ಧಾರವಾಡ ಜಿಲ್ಲೆಯಲ್ಲಿ 32 ವಿದ್ಯಾರ್ಥಿಗಳನ್ನು ಮಾತ್ರ ಇದಕ್ಕೆ ಆಯ್ಕೆ ಮಾಡುತ್ತಿದ್ದರು. ನಾನು ಹೊಳೆ ಆಲೂರು ಪ್ರೌಢಶಾಲೆಯಲ್ಲಿನ ಶೈಕ್ಷಣಿಕ ಪರಿಸರಕ್ಕಾಗಿ ಆ ಶಾಲೆಗೆ ಹೋಗಿದ್ದೆ. ಅಲ್ಲಿ ಅರ್ಪಣಾ ಮನೋಭಾವದ ಅಧ್ಯಾಪಕರಿದ್ದರು. ನಾವು ಅಣಕು ಸಂಸತ್ತು ಮಾಡಿದ್ದೆವು. ಇಂಗ್ಲಿಷ್ ನಾಟಕಗಳನ್ನು ಆಡಿದ್ದೆವು. ನನಗೆ ಅಲ್ಲಿ ಅಧ್ಯಾಪಕರು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ ಓದಿ ಅರ್ಥಮಾಡಿಕೊಳ್ಳವಷ್ಟು ಇಂಗ್ಲಿಷ್ ಕಲಿಸಿದ್ದರು. ಕಬಡ್ಡಿ, ಕೊಕ್ಕೊ ಕ್ರೀಡೆಗಳು ನಮ್ಮನ್ನು ಆಕರ್ಷಿಸಿದ್ದವು. ಶಹನಾಯ್ ವಾದಕರಾದ ಯಲ್ಲಪ್ಪ ಅಮರಗೋಳ ನಮಗೆ ಸಂಗೀತ ಅಧ್ಯಾಪಕರು. ನಮಗೆ ಸಂಗೀತದ ರುಚಿ ಹಿಡಿಸಿದವರು ಅವರು. ಮಡಿವಾಳರ್ ಚಿತ್ರಕಲಾ ಶಿಕ್ಷಕರು. ಅವರಿಂದ ಚಿತ್ರಕಲೆಯಲ್ಲಿ ಆಸಕ್ತಿ ಹುಟ್ಟಿತು.

ಆಗ ಚೀನಾ– ಭಾರತ ಯುದ್ಧದ ಕಾಲ. ನಮ್ಮ ಅಧ್ಯಾಪಕರು ನಮಗೆ ಭಾಷಣಗಳನ್ನು ಕಲಿಸಿಕೊಟ್ಟರು. ಅವರ ಮುಂದಾಳತ್ವದಲ್ಲಿ ಹಳ್ಳಿಹಳ್ಳಿಗೆ ಹೋಗಿ ದೇಶಪ್ರೇಮದ ಬಗೆಗೆ ಭಾಷಣ ಮಾಡಿ ಯುದ್ಧನಿಧಿ ಸಂಗ್ರಹಿಸಿ ಧಾರವಾಡ ಜಿಲ್ಲಾಧಿಕಾರಿಗಳಿಗೆ ಅರ್ಪಿಸಿದ್ದೆವು. ಅಲ್ಲಿ ನಮಗೆ ಶಿಕ್ಷಣದ ಜೊತೆ ವ್ಯವಸಾಯ ಮತ್ತು ಬಡಗಿ ಕೆಲಸಗಳನ್ನು ಕಲಿಸಿದ್ದರು. ಹೆಸರಿಗೆ ತಕ್ಕಂತೆ 'ಶ್ರೀ ಕಲ್ಮೇಶ್ವರ ವಿವಿಧೋದ್ದೇಶ ಪ್ರೌಢಶಾಲೆ' ಅಂದು ಅತ್ಯಂತ ಕ್ರಿಯಾಶೀಲವಾಗಿತ್ತು.

ಕರ್ನಾಟಕ ಏಕೀಕರಣಕ್ಕೆ ದುಡಿದ, ಕನ್ನಡ ಕುಲಪುರೋಹಿತರು ಎಂದೇ ಖ್ಯಾತರಾದ, ಬಾಲಗಂಗಾಧರಕ ತಿಲಕ ಅವರ ಶ್ರದ್ಧಾವಂತ ಅನುಯಾಯಿಗಳಾದ ಆಲೂರು ವೆಂಕಟರಾಯರು ಮತ್ತು ಕನ್ನಡ ಸಾಹಿತ್ಯ ಚರಿತ್ರೆಗೆ ಹೊಸ ರೂಪ ಕೊಟ್ಟಿರುವ ಡಾ. ರಂ.ಶ್ರೀ. ಮುಗಳಿ ಹೊಳೆ ಆಲೂರಿನವರು.

ನಾವು ಅಲ್ಲಿಗೆ ಹೋದಾಗ ಸಂಜೆ 3 ಘಂಟೆಯ ಸಮಯವಿರಬಹುದು. ನಾವು ಮೊದಲೇ ಹೇಳಿದ್ದ ಕಾರಣ ಪ್ರಾಂಶುಪಾಲರು, ಮುಖ್ಯ ಶಿಕ್ಷಕರು ಮತ್ತು ಕೆಲವು ಅಧ್ಯಾಪಕರುಗಳಿದ್ದರು. ಊರನ್ನು ಒಂದು ಸುತ್ತು ಹಾಕಿದೆವು. ಹಿಂದೆ ನಮ್ಮ ಶಾಲೆಯು ಊರಿನಲ್ಲಿದ್ದ ಮನೆಯೊಂದರಲ್ಲಿ ನಡೆಯುತ್ತಿತ್ತು. ಆ ಜಾಗ ನೋಡಿದೆವು. ನಾವು ಓದುತ್ತಿರುವಾಗಲೇ ಈ ಹೊಸ ಕಟ್ಟಡ ನಿರ್ಮಾಣವಾಯಿತು. ಯೆಚ್ಚರಸ್ವಾಮಿ ಮಠದಲ್ಲಿ ಪೂಜಾ ಕಾರ್ಯ ನಡೆಯಿತು.

ನಮ್ಮ ಪ್ರೌಢಶಾಲೆಯ ಪಕ್ಕದಲ್ಲಿ ಮಲಪ್ರಭಾ ನದಿಯಿದ್ದು, ಅದಕ್ಕೆ ಹೊಂದಿಕೊಂಡಂತೆ ಶಿವ ದೇವಾಲಯವಿದೆ. ಅದನ್ನು ನೋಡಿದೆವು. ಈಗ ದೇವಾಲಯವನ್ನು ಚೆನ್ನಾಗಿ ನಿರ್ಮಾಣ ಮಾಡಿದ್ದಾರೆ. ಅದರ ಮುಂದೆಯೇ ಅಂದರೆ ಶಾಲೆಯ ಎದುರಿನಲ್ಲಿ ನಮ್ಮ ಹಾಸ್ಟೆಲ್ ಇತ್ತು. ಅದನ್ನು ನೋಡಿದೆ. ಅದು ಕುಸಿದು ಬೀಳುವ ಸ್ಥಿತಿಯಲ್ಲಿದೆ. ಮಳೆಗಾಲದಲ್ಲಿ ಪ್ರವಾಹ ಬರುವ ಕಾರಣ ಹಾಸ್ಟೆಲ್ ದುಃಸ್ಥಿತಿಗೆ ಬಂದಿದೆ ಎಂದು ಅಧ್ಯಾಪಕರು ವಿವರಿಸಿದರು. ವಿದ್ಯಾರ್ಥಿಗಳಿಗೆ ಬೇರೆ ವ್ಯವಸ್ಥೆಯಿದೆಯೇ ಎಂದು ಕುತೂಹಲದಿಂದ ಪ್ರಶ್ನಿಸಿದೆ. ಅದಕ್ಕೆ ಅವರು ಅಂತಹ ವ್ಯವಸ್ಥೆಯಿಲ್ಲ ಎಂದರು. ವಿಶಾಲವಾದ ಆಟದ ಮೈದಾನವಿದೆ. ಅಲ್ಲಿ



ಮಕ್ಕಳು ವಾಲಿಬಾಲ್ ಅಥವಾ ಕ್ರಿಕೆಟ್ ಆಡುವ ಚಿಹ್ನೆಗಳು ಗೋಚರವಾಗಲಿಲ್ಲ. ಈ ಸಂಸ್ಥೆಯಲ್ಲಿ ಒಟ್ಟು 800 ವಿದ್ಯಾರ್ಥಿಗಳು ಈಗ ವ್ಯಾಸಂಗ ಮಾಡುತ್ತಿದ್ದಾರೆ. ಪ್ರೌಢಶಾಲೆಯ ಜೊತೆ ಪದವಿಪೂರ್ವ ಮತ್ತು ಪದವಿ ಕಾಲೇಜುಗಳಿವೆ. ಈ ಕಾಲೇಜುಗಳಲ್ಲಿ ವಿಜ್ಞಾನ, ವಾಣಿಜ್ಯ ಮತ್ತು ಕಲಾ ವಿಷಯಗಳ ಅಧ್ಯಯನಕ್ಕೆ ಅವಕಾಶವಿದೆ.

ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಪ್ರಾಂಶುಪಾಲರ ಕೊಠಡಿಗಳು ಹಳೆಯ ಕಾಲದ ಗೋಡೌನ್‌ಗಳಂತೆ ಗೋಚರವಾದವು. ಶಾಲಾ ಕೊಠಡಿಗಳ ಸ್ಥಿತಿ ಹೇಳಲು ಸಾಧ್ಯವಿಲ್ಲ. ಗೋಡೆ ಮತ್ತು ಕಿಟಕಿ, ಬಾಗಿಲುಗಳು ಸುಣ್ಣಬಣ್ಣವಿಲ್ಲದೆ ಪುರಾತನಕಾಲವನ್ನು ಜ್ಞಾಪಿಸುತ್ತಿದ್ದವು. ನೆಲದ ಮೇಲೆ ಬರಿಗಾಲಿನಲ್ಲಿ ಓಡಾಡುವುದಕ್ಕೆ ಭಯವಾಗುತ್ತದೆ. ಈ ಸಂಸ್ಥೆ ಸರ್ಕಾರದ ಅನುದಾನಕ್ಕೊಳಪಟ್ಟಿದೆ.

ಹೊಳೆ ಆಲೂರು ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆ ಊರಿನವರು ಮತ್ತು ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದವರು. ಆರ್ಥಿಕವಾಗಿ ಅತ್ಯಂತ ಹಿಂದುಳಿದ ಕುಟುಂಬದಿಂದ ಬಂದ ಮಕ್ಕಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಇಂತಹ ಮಕ್ಕಳಿಗೆ ಶಿಕ್ಷಣ ನೀಡುವ ವಿದ್ಯಾಸಂಸ್ಥೆಯು ಉತ್ತಮ ಪರಿಸರ, ಅಗತ್ಯ ಮೂಲಭೂತ ಸೌಕರ್ಯ, ಸುಸಜ್ಜಿತವಾದ ಕ್ರೀಡಾಂಗಣ, ಕಿರುಸಭಾಂಗಣ, ಬಿಸಿಯೂಟ ಮತ್ತು ಹಾಸ್ಟೆಲ್ ಸೌಲಭ್ಯ ಹೊಂದಿರುವುದು ಅಗತ್ಯವಲ್ಲವೇ? ಇದನ್ನು ನೀಡುವುದು ನಾಗರಿಕ ಸರ್ಕಾರದ ಆದ್ಯ ಕರ್ತವ್ಯವಲ್ಲವೇ? ನಗರ ಪ್ರದೇಶದ ಮಕ್ಕಳಿಗೆ ಸರ್ಕಾರಿ ಶಾಲೆಯಲ್ಲದಿದ್ದರೂ ಆಯಾಯ ಕುಟುಂಬಗಳ ವರಮಾನಕ್ಕೆ ತಕ್ಕಂತೆ ಖಾಸಗಿ ಶಾಲೆಗಳಿರುತ್ತವೆ. ಹೊಳೆ ಆಲೂರಿನ ಮಕ್ಕಳಿಗೆ ಯಾವ ಆಯ್ಕೆಯಿದೆ? ಅವರು ಇಲ್ಲಿ ಹುಟ್ಟಿರುವುದು ಶಾಪವೇ?

ನನ್ನಂತಹ ಅನೇಕ ಜನರನ್ನು ರೂಪಿಸಿದ ಕೀರ್ತಿ ಹೊಳೆ ಆಲೂರಿನ ಶ್ರೀ ಕಲ್ಮೇಶ್ವರ ವಿವಿಧೋದ್ದೇಶ ಪ್ರೌಢಶಾಲೆಗಿದೆ. ಈ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ದೇಶದ ಎಲ್ಲಾ ಕಡೆಯಿದ್ದಾರೆ. ಅವರನ್ನು ಸಂಪರ್ಕ ಮಾಡಿದರೆ ಅವರು ಸಹಾಯಹಸ್ತವನ್ನು ಚಾಚಬಹುದು.

ಎಂಬತ್ತೂರು ವರ್ಷಗಳ ಹಿಂದೆ ಸಂಗನಗೌಡ ಪಾಟೀಲ್ ಅವರು ಮಹಾನ್ ಉದ್ದೇಶದಿಂದ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ್ದರು. ಅವರ ಸ್ಥಾಪನಾ ಉದ್ದೇಶವೇ ನಿರರ್ಥಕವಾಗಬೇಕೇ, ಬಹಳ ಆಶ್ಚರ್ಯಕರ ಸಂಗತಿಯೆಂದರೆ, ಹೊಳೆ ಆಲೂರು ಲೋಕೋಪಯೋಗಿ ಸಚಿವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಸಚಿವರಾದ ಸಿ.ಸಿ.ಪಾಟೀಲ್ ಪ್ರಗತಿಪರ ಧೋರಣೆಯುಳ್ಳ ದಕ್ಷ ಸಚಿವರು. ಪ್ರಾಯಶಃ ಶ್ರೀಕಲ್ಮೇಶ್ವರ ಪ್ರೌಢಶಾಲೆಯ ದುಃಸ್ಥಿತಿ ಅವರ ಗಮನಕ್ಕೆ ಬಂದಿಲ್ಲವೆಂದು ಭಾವಿಸುತ್ತೇನೆ.

▶▶ 5ನೇ ಪುಟಕ್ಕೆ...

**ಭಾರತ ಇಂದು ವಿಶ್ವವೇ ಹೆಮ್ಮೆಪಡುವಂತಹ ರಾಷ್ಟ್ರಪತಿಯನ್ನು ಹೊಂದಿದೆ. ಗೌರವಾನ್ವಿತ ರಾಷ್ಟ್ರಪತಿಗಳಾಗಿರುವ ಶ್ರೀಮತಿ ದ್ರೌಪದಿ ಮುರ್ಮು ಅವರು ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವ ಸಂದರ್ಭದಲ್ಲಿ ನೀಡಿದ ಸಂದೇಶ ಅತ್ಯಂತ ಮನನೀಯವಾಗಿದೆಯೆಂಬುದು ಪ್ರಜ್ಞಾವಂತರ ಅಭಿಪ್ರಾಯ. ಮೂಲತಃ ಆದಿವಾಸಿ ಸಮುದಾಯದಿಂದ ಬಂದಿರುವ ರಾಷ್ಟ್ರಪತಿಗಳು ಭಾರತದ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಎಲ್ಲರಿಗೂ ಅವಕಾಶ ದೊರೆಯುತ್ತದೆ ಎಂಬ ಸಂದೇಶವನ್ನು ಸಾರಿದ್ದಾರೆ.**

**ಸಂಪಾದಕರ ವಾಣಿ**



**ಅಂಬಿಕಾ ಎಂ ಹುಲಿನಾಯ್ಕರ್**
**ಆಡಳಿತಾಧಿಕಾರಿ,**
**ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು**

# ಮಹಿಳೆಯ ಧ್ವನಿ ಶಾಸನಸಭೆಗಳಲ್ಲಿ ಮೊಳಗಲಿ

ತುಮಕೂರಿನಲ್ಲಿ 2023ರ ಜನವರಿ 20 ಹಾಗೂ 21 ಭಾರತೀಯ ಜನತಾ ಪಕ್ಷದ ಮಹಿಳಾ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಡೆಯಿತು. ನಾನು ತುಮಕೂರು ಜಿಲ್ಲೆಯ ಮಹಿಳಾ ಮೋರ್ಚಾದ ಅಧ್ಯಕ್ಷಳಾದ ಕಾರಣ, 'ಅದರ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಯಿತು. ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಲ್. ಸಂತೋಷ್ ಮತ್ತು ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ ಅವರು ಭಾಗವಹಿಸಿ ಸಂಘಟನೆಯ ವಿಚಾರದಲ್ಲಿ ಸಲಹೆ ನೀಡಿದರು. ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಹಾಗೂ ಲೋಕಸಭಾ ಸದಸ್ಯರಾದ ಜಿ.ಎಸ್.ಬಸವರಾಜು, ಬಿಜೆಪಿ ಮಹಿಳಾ ಮೋರ್ಚ್‌ದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀಮತಿ ವಿನತಿ ಶ್ರೀನಿವಾಸನ್ ಮತ್ತು ರಾಜ್ಯಾಧ್ಯಕ್ಷರಾಗಿರುವ ಶ್ರೀಮತಿ ಗೀತಾ ವಿವೇಕಾನಂದ ಅವರುಗಳು ಪಾಲ್ಗೊಂಡು ಮುಂದಿನ ದಿನಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಮಾರ್ಗದರ್ಶನ ನೀಡಿದರು.



ರಾಷ್ಟ್ರೀಯ ಮಹಿಳಾ ಮೋರ್ಚಾ ದೇಶದ ಆಗು–ಹೋಗುಗಳ ಬಗೆಗೆ ವ್ಯಾಪಕವಾದ ಚಿಂತನ–ಮಂಥನ ನಡೆಸಿತು. ಕಳೆದ ಎಂಟು ವರ್ಷಗಳಲ್ಲಿ ಭಾರತ ಸಾಧಿಸಿರುವ ಪ್ರಗತಿಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿತು. ಇಂದು ಭಾರತ ವಿಶ್ವದ ಅಗ್ರಗಣ್ಯ ರಾಷ್ಟ್ರಗಳಲ್ಲಿ ಒಂದಾಗಿದೆ. ರಷ್ಯಾ–ಉಕ್ರೇನ್ ಯುದ್ಧದ ಸಂದರ್ಭದಲ್ಲಿ ಇಡೀ ವಿಶ್ವ ಭಾರತದ ಕಡೆ ನೋಡುತ್ತಿತ್ತು. ಭಾರತ ಈ ಯುದ್ಧದ ಸಂದರ್ಭದಲ್ಲಿ ಹಾಗೂ ಕೋವಿಡ್ ಸನ್ನಿವೇಶದಲ್ಲಿ ಮೆರೆದ ಮಾನವೀಯ ಅನುಕಂಪ ಶ್ಲಾಘನೀಯವಾದದ್ದು. ವಿಶ್ವದಲ್ಲಿ ಯಾವುದೇ ದೇಶ ಸಂಕಷ್ಟದಲ್ಲಿದ್ದರೆ ಅದರ ನೆರವಿಗೆ ಭಾರತ ಹೋಗಿರುವುದನ್ನು ಕಾಣಬಹುದು. ಶ್ರೀಲಂಕಾದಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾದಾಗ ಸಹಾಯಹಸ್ತ ಚಾಚಲಾಯಿತು. ಅದೇ ಇತ್ತೀಚೆಗೆ ಟರ್ಕಿಯಲ್ಲಿ ಭೂಕಂಪವಾದಾಗಲೂ ಭಾರತ ತನ್ನ ಕಾಳಜಿಯನ್ನು ಸಮರ್ಪಕವಾಗಿ ವ್ಯಕ್ತಪಡಿಸಿದೆ.

ಭಾರತ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನ ಕ್ರಿಯಾಶೀಲ ಚಟುವಟಿಕೆಗಳನ್ನು ಕೈಗೊಂಡ ಕಾರಣಕ್ಕೆ ಅದಕ್ಕೆ ಜಿ20ರ ಅಧ್ಯಕ್ಷ ಸ್ಥಾನ ಒಲಿದುಬಂದಿದೆ. ಡಿಸೆಂಬರ್‌ನಲ್ಲಿ ಭಾರತ ಜಿ20 ದೇಶಗಳ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿದೆ. ಭಾರತದ ಈ ಸಾಧನೆಯು ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ನಡೆದಿದೆ. ನಮ್ಮ ದೇಶದ ಪ್ರಧಾನಿ ವಿಶ್ವದ ಗಣ್ಯನಾಯಕರಲ್ಲಿ ಒಬ್ಬರಾಗಿರುವುದು ಭಾರತೀಯರಿಗೆ ಅಭಿಮಾನದ ಸಂಗತಿಯೂ ಹೌದು. ಭಾರತವು ವಿಶ್ವಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆಯನ್ನು ವಿಶ್ಲೇಷಿಸಿದ ಕಾರ್ಯಕಾರಿಣಿ ಸಮಿತಿಯು ಪ್ರಧಾನಿ ಶ್ರೀ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸಿತು.

ಭಾರತ ಇಂದು ವಿಶ್ವವೇ ಹೆಮ್ಮೆಪಡುವಂತಹ ರಾಷ್ಟ್ರಪತಿಯನ್ನು ಹೊಂದಿದೆ. ಗೌರವಾನ್ವಿತ ರಾಷ್ಟ್ರಪತಿಗಳಾಗಿರುವ ಶ್ರೀಮತಿ ದ್ರೌಪದಿ ಮುರ್ಮು ಅವರು ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವ ಸಂದರ್ಭದಲ್ಲಿ ನೀಡಿದ ಸಂದೇಶ ಅತ್ಯಂತ ಮನನೀಯವಾಗಿದೆಯೆಂಬುದು ಪ್ರಜ್ಞಾವಂತರ ಅಭಿಪ್ರಾಯ. ಮೂಲತಃ ಆದಿವಾಸಿ ಸಮುದಾಯದಿಂದ ಬಂದಿರುವ ರಾಷ್ಟ್ರಪತಿಗಳು ಭಾರತದ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಎಲ್ಲರಿಗೂ ಅವಕಾಶ ದೊರೆಯುತ್ತದೆ ಎಂಬ ಸಂದೇಶವನ್ನು ಸಾರಿದ್ದಾರೆ.

ಮಹಿಳಾ ಸಬಲೀಕರಣಕ್ಕಾಗಿ ಭಾರತ ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿದೆ. ಅದರಲ್ಲೂ ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಬೆಳವಣಿಗೆಯನ್ನು ಸ್ವತಃ ಪ್ರಧಾನಿ ತಮ್ಮ ಭಾಷಣಗಳಲ್ಲಿ ಸದಾ ಪ್ರಸ್ತಾಪಿಸುತ್ತಾರೆ. ಜನನಿ ಸುರಕ್ಷಾ ಯೋಜನಾ ಮತ್ತು ಪ್ರಧಾನಮಂತ್ರಿ ಮಾತೃತ್ವ ಅಭಿಯಾನ ಯೋಜನೆಗಳು ಮಹಿಳೆಯರಿಗೆ ವರದಾನವಾಗಿವೆ. ಮಹಿಳೆಯರು ಹೆರಿಗೆ ಸಂದರ್ಭದಲ್ಲಿ ಅನುಭವಿಸುವ ಕಷ್ಟಕ್ಕೆ ಪರಿಹಾರವಾಗಿ ಈ ಯೋಜನೆ ರೂಪಿಸಲಾಗಿದೆ. ಕುಡಿಯುವ ನೀರು ಮನೆ ಬಾಗಿಲಿಗೆ ತರುವ ಜಲಮಿಷನ್ ಕಾರ್ಯಾರಂಭ ಮಾಡಿದೆ. ಗೃಹಿಣಿಯರಿಗೆ ಅನುಕೂಲವಾಗುವಂತೆ ಉಜ್ವಲ ಗ್ಯಾಸ್ ಯೋಜನೆಯನ್ನು ಜಾರಿಗೆ ತರಲಾಗಿದೆ.

ಈ ಮಧ್ಯೆ ಭಾರತ ಸರ್ಕಾರ ಬಾಲಕಿಯರ ಮದುವೆಯ ವಯಸ್ಸನ್ನು 18ರಿಂದ 21ಕ್ಕೆ ಪ್ರಯತ್ನ ನಡೆಸಿತ್ತು. ಅಪ್ರಾಪ್ತ ವಯಸ್ಸಿನಲ್ಲಿ ಮದುವೆಯಾಗಿ ಮಕ್ಕಳನ್ನು ಹೆತ್ತರೆ ಮಗು ಮತ್ತು ತಾಯಿಗೂ ಅಪಾಯ ಹೆಚ್ಚಿರುತ್ತದೆ. ಅದರಲ್ಲೂ ಬಾಲ್ಯವಿವಾಹ ದೇಶದ ದೊಡ್ಡ ಪಿಡುಗಾಗಿದೆ. ಅದನ್ನು ನಿಯಂತ್ರಿಸಲು ಇಂತಹ ಶಾಸನಗಳ ಅಗತ್ಯವಿದತ್ತು. ಜೊತೆಗೆ ಈ ಶಾಸನದಿಂದ ಮಹಿಳೆ ಮತ್ತು ಮಕ್ಕಳು ಅಪೌಷ್ಟಿಕತೆಯಿಂದ ಬಳಲುವ ಸನ್ನಿವೇಶಗಳು ಕಡಿಮೆಯಾಗುತ್ತಿದ್ದವು. ಮಹಿಳಾ ಮೋರ್ಚಾ ದೇಶದ ವಿವಿಧ ಕಡೆ ಮಹಿಳೆಯ ಮೇಲೆ ನಡೆಯುತ್ತಿರುವ ಶೋಷಣೆಯ ವಿರುದ್ಧವೂ ಧ್ವನಿಯೆತ್ತಿದೆ.

ಈ ಸಂದರ್ಭದಲ್ಲಿ ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಇತ್ತೀಚೆಗೆ ಮಂಡಿಸಿದ ಕೇಂದ್ರದ ಆಯವ್ಯಯ ಸಾಕಷ್ಟು ಮೆಚ್ಚುಗೆಗೆ ಪಾತ್ರವಾಗಿದೆ. ಇದನ್ನು ಅಮೃತಕಾಲದ ಆಯವ್ಯಯ ಎಂದೇ ಪ್ರಶಂಸೆ ಮಾಡಲಾಗಿದೆ. ಭಾರತದ ಆರ್ಥಿಕ ಕ್ಷೇತ್ರದ ಸ್ಥಿರವಾದ ಬೆಳವಣಿಗೆಗೆ ಹಣಕಾಸು ಸಚಿವೆಯಾಗಿರುವ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರ ಕೊಡುಗೆಯಿರುವುದು ಮರೆಯುವಂತಿಲ್ಲ. ಅದರಲ್ಲೂ ಕೋವಿಡ್–19ರ ಸಂದರ್ಭದಲ್ಲಿ ವಿಶ್ವದ ಆರ್ಥಿಕ ಕ್ಷೇತ್ರ ಹಿಂದೆಂದೂ ಕಾಣದ ಹಿಂಜರಿತವನ್ನು ಕಂಡಿತು. ಆದರೆ ಭಾರತದ ಆರ್ಥಿಕ ಕ್ಷೇತ್ರ ಪ್ರಗತಿಯನ್ನು ಸಮತೋಲನವಾಗಿ ಸಾಧಿಸಿರುವ ಕಾರಣ ಆರ್ಥಿಕ ಹಿಂಜರಿತ ಭಾರತದಲ್ಲಿ ಅಷ್ಟಾಗಿ ಕಂಡುಬಂದಿಲ್ಲ. ಕೇಂದ್ರ ಸರ್ಕಾರ ಕೋವಿಡ್ ಸಂದರ್ಭದಲ್ಲಿ ಜನರಿಗೆ ಕೆಲವು ರೀತಿಯ ಸಹಾಯವನ್ನು ಮಾಡಿದೆ. ದೇಶದ ಶೇಕಡ ತೊಂಬತ್ತರಷ್ಟು ಜನರಿಗೆ ಕೋವಿಡ್ ವ್ಯಾಕ್ಸಿನೇಷನ್ ಉಚಿತವಾಗಿ ಕೊಡಲಾಗಿದೆ. ದೀರ್ಘಕಾಲದ ಆಳ್ವಿಕೆ ಮಾಡಿದ್ದರೂ ಗುಜರಾತಿನಲ್ಲಿ ಅಧಿಕಾರಕ್ಕೆ ಬರಲು ಜನೋಪಯೋಗಿ ಕಾರ್ಯಗಳು ಮುಖ್ಯ ಪಾತ್ರ ವಹಿಸಿವೆ.

ಬ್ಯಾಬಿಲೋನಿಯಾದ ಗಾದೆ ಮಾತೊಂದು ಹೀಗಿದೆ. "ಸಹಜವಾಗಿಯೇ ಹೆಣ್ಣು ಬುದ್ಧಿವಂತೆ. ಸಮಯಸ್ಫೂರ್ತಿ ಆಕೆಗೆ ಹೇಳಿ ಮಾಡಿಸಿದ ಗುಣ. ಅವಳಲ್ಲಿ ನಿರಂತರವಾಗಿ ಕಲಿಯುವ ಗುಣವಿರುತ್ತದೆ". ಈ ಮಾತುಗಳು ಎಲ್ಲರ ಅನುಭವಕ್ಕೂ ಬಂದಿರುತ್ತದೆ. ಎಂಬತ್ತು ವರ್ಷದ ನನ್ನ ಅಜ್ಜಿ ತಮ್ಮ ಬದುಕಿನ ಕೊನೆಯ ತನಕ ತಮ್ಮನ್ನು ಕೆಲಸದಲ್ಲಿ ತೊಡಗಿಸಿಕೊಳ್ಳುವ ಹುಮ್ಮಸ್ಸು ಹೊಂದಿದ್ದರು. ಇನ್ನು ತಾಯಂದಿರು ಮಕ್ಕಳನ್ನು ಬೆಳೆಸುವಾಗ ತಮ್ಮ ವೈಯಕ್ತಿಕ ಕಷ್ಟಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅದೇ ಸರ್ಕಾರದಲ್ಲಿರುವ ಅನೇಕ ಮಹಿಳೆಯರು ಉತ್ತಮ ಕೆಲಸ ಮಾಡುತ್ತಾ ಬಂದಿದ್ದಾರೆ. ಜನಸಂಖ್ಯೆಯಲ್ಲಿ ಶೇಕಡ ಅರ್ಧದಷ್ಟಿರುವ ಮಹಿಳೆಯರಿಗೆ ರಾಜಕೀಯವು ಸೂಕ್ತ ಅವಕಾಶಗಳನ್ನು ಕೊಟ್ಟಿಲ್ಲವೆಂದರೆ ತಪ್ಪಿಲ್ಲ.

ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿಯಿಂದಾಗಿ ಶೇಕಡ 50ರಷ್ಟು ಮಹಿಳೆಯರನ್ನು ಕಾಣಬಹುದು. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ನಗರಪಾಲಿಕೆ ಮತ್ತು ಇತರೆ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಪ್ರತಿನಿಧಿಗಳು ಉತ್ತಮ ಕೆಲಸ ಮಾಡಿದ್ದಾರೆ. ಆದರೆ ಅವರ ವಿರುದ್ಧ ನಿರಂತರ ಅಪಪ್ರಚಾರವನ್ನು ನೋಡಬಹುದು. ಮಾನವ ಸಹಜ ದೌರ್ಬಲ್ಯಗಳು ಕೆಲವು ಮಹಿಳಾ ಪ್ರತಿನಿಧಿಗಳಲ್ಲೂ ಇರುತ್ತವೆ, ಪುರುಷರಲ್ಲೂ ಇರುತ್ತವೆ. ಅದನ್ನು ವ್ಯಕ್ತಿಗತವಾಗಿ ನೋಡಬೇಕೇ ಹೊರತು ಮಹಿಳಾ ಸಮುದಾಯವನ್ನು ಒಟ್ಟಾರೆ ಗುರಿಯಾಗಿಸಿಕೊಂಡು ಟೀಕೆ ಮಾಡಬಾರದು. ಅನೇಕ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆ ತನಗೆ ವಹಿಸಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾಳೆ. ಇಂದು ಕರ್ನಾಟಕ 'ಬಯಲು ಬಹಿರ್ದೆಸೆ ಮುಕ್ತ' ರಾಜ್ಯವಾಗಿದ್ದರೆ ಅದಕ್ಕೆ ನಮ್ಮ ಮಹಿಳಾ ಜನಪ್ರತಿನಿಧಿಗಳ ಕೊಡುಗೆ ಹೆಚ್ಚಿದೆ.

ದಕ್ಷತೆ, ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿರ್ವಹಣೆ ವ್ಯಕ್ತಿಗತವಾಗಿ ಅಥವಾ ಲಿಂಗಸ್ವರೂಪದಲ್ಲಿ ಬರುವ ಗುಣವಲ್ಲ. ಅವಕಾಶ ಸಿಕ್ಕಾಗ ವ್ಯಕ್ತಿಯಲ್ಲಿರುವ ಚೈತನ್ಯಶಕ್ತಿ ಬೆಳಕಿಗೆ ಬರುತ್ತದೆ. ದಶಕಗಳ ಕಾಲ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾ ಗಾಂಧಿ ಮತ್ತು ವಿದೇಶಾಂಗ ಸಚಿವರಾಗಿದ್ದ ಶ್ರೀಮತಿ ಸುಷ್ಮಾ ಸ್ವರಾಜ್ ಅವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ತೋರಿದ ಪಾತ್ರ ಸದಾ ಕಾಲ ಸ್ಮರಣೀಯವಾಗಿದೆ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಮದ್ಯಪಾನದ ಸಾರ್ವತ್ರೀಕರಣ ವಿರೋಧಿಸಿ ಅರವತ್ತದ ದಶಕದಲ್ಲಿ ರಾಜೀನಾಮೆ ಕೊಟ್ಟ ಶ್ರೀಮತಿ ಯಶೋಧರಮ್ಮ ದಾಸಪ್ಪ ಮತ್ತು ವಿಧಾನಸಭೆಯ ಅಧ್ಯಕ್ಷರು, ವಿರೋಧಪಕ್ಷದ ನಾಯಕರು ಹಾಗೂ ಸಚಿವರಾಗಿದ್ದ ಶ್ರೀಮತಿ ಆರ್. ನಾಗರತ್ನಮ್ಮ ಅವರನ್ನು ಜನ ಬಹುದಿನದಿಂದ ನೆನೆಯುತ್ತಾರೆ.

ಕರ್ನಾಟಕ ವಿಧಾನಸಭೆಯಲ್ಲಿ ಪ್ರಸ್ತುತ ಏಳೆಂಟು ಶಾಸಕಿಯರು ಮಾತ್ರವಿದ್ದಾರೆ. ಇವರ ಸಂಖ್ಯೆ ಕನಿಷ್ಠ ಐವತ್ತಾದರೂ ಆಗಬೇಕು. ಒಂದು ಲೋಕಸಭಾ ಕ್ಷೇತ್ರಕ್ಕೆ ಇಬ್ಬರು ಮಹಿಳೆಯರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಎಲ್ಲಾ ರಾಜಕೀಯ ಪಕ್ಷಗಳು ಅವಕಾಶ ಮಾಡಿಕೊಡಬೇಕು.

ರಾಜ್ಯದ ಆರೋಗ್ಯ, ಮಹಿಳೆಯ ಕಲ್ಯಾಣ, ಶಿಕ್ಷಣ, ಪೌಷ್ಟಿಕತೆ, ಮಕ್ಕಳ ಆರೋಗ್ಯ ಮುಂತಾದ ವಿಚಾರಗಳಲ್ಲಿ ನೈಜ ಸುಧಾರಣೆಯಾಗಬೇಕಾದರೆ ಶಾಸನ ಮಾಡುವ ಸ್ಥಳದಲ್ಲಿ ಮಹಿಳೆಗೆ ಅವಕಾಶ ದೊರೆಯುವಂತಾಗಬೇಕು. ಮಹಾತ್ಮ ಗಾಂಧೀಜಿ ಹೇಳಿದಂತೆ 'ಮಹಿಳೆ ಅಬಲೆ ಎಂದು ಭಾವಿಸಿದರೆ ಅದು ಪುರುಷನ ದೌರ್ಬಲ್ಯವೇ ಹೊರತು ವಾಸ್ತವದ ಸಂಗತಿ ಹಾಗಿಲ್ಲ'.

ಮುಂದಿನ ದಿನಗಳಲ್ಲಾದರೂ ಮಹಿಳೆಯ ಧ್ವನಿ ಶಾಸನಸಭೆಗಳಲ್ಲಿ ಮೊಳಗಲಿ ಎಂಬ ಆಶಯ ದೇಶವನ್ನು ನಿಜವಾಗಿ ಪ್ರೀತಿಸುವ ಎಲ್ಲರಲ್ಲೂ ಕಾಣಬಹುದು.

■ ನಿರೂಪಣೆ: **ವೆಂಕಟೇಶ ಪ್ರಸಾದ್ ಬಿ.ಎಸ್.**

**ಪತ್ರಿಕೆಯ ಬಳಗ**

ಪ್ರಧಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ** ಪುಟ ವಿನ್ಯಾಸ: **ಸುಮಾ ಸಾಗರ್**

# ರೈತನ ಅಭಿವೃದ್ಧಿಗೆ ಏನು ಬೇಕು?

**ಸ್ವಾತಂತ್ರ್ಯಾನಂತರ ದೇಶದ ನಾಯಕರು ಮತ್ತು ಅಧಿಕಾರಿಗಳು ರೈತರ ಅಭ್ಯುದಯಕ್ಕೆ ದೊಡ್ಡ ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಅದರಲ್ಲಿ ಅನೇಕವು ರೈತರಿಗೆ ಮುಟ್ಟುವುದೇ ಇಲ್ಲ. ಮಧ್ಯವರ್ತಿಗಳೇ ಅದನ್ನು ನುಂಗಿ ನೀರು ಕುಡಿಯುತ್ತಾರೆ.**

▪ **ಡಾ. ಎಂ.ಆರ್. ಹುಲಿನಾಯ್ಕರ್**

ನನ್ನೂರು ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ತುಪ್ಪದಕುರುಹಟ್ಟಿ, ನಮ್ಮ ತಂದೆಯ ತಾಯಿ ಮತ್ತು ಅವರ ಸಹೋದರಿಯ ಮನೆ ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಆಲದಕಟ್ಟೆ. ಬಾಲ್ಯದಲ್ಲಿ ನಾನು ಒಂದೆರಡು ಸಲ ಈ ಊರಿಗೆ ಬಂದಿದ್ದೆ. ಆಗವರು ನಮ್ಮನ್ನು ತುಂಬಾ ಚೆನ್ನಾಗಿ ನೋಡಿಕೊಂಡಿದ್ದರು. ನಾವು ಊರಿಗೆ ಮರಳುವ ಸಂದರ್ಭದಲ್ಲಿ ಚಕ್ಕಡಿ ತುಂಬಾ ಜಾನುವಾರುಗಳಿಗೆ ಮೇವು, ಸಜ್ಜೆ ಮತ್ತು ಜೋಳವನ್ನು ಕೊಟ್ಟಿದ್ದರು.

ನಂತರ ನಾನು ವೈದ್ಯನಾದ ಮೇಲೆ ಅವರುಗಳು 'ಇವರು ನಮ್ಮವರು' ಎಂದುಕೊಂಡು ಆಗಾಗ ತುಮಕೂರಿಗೆ ಬರುತ್ತಿದ್ದರು. ವಿಶೇಷವಾಗಿ ಆರೋಗ್ಯದ ಸಮಸ್ಯೆಯಿದ್ದರೆ ನಮ್ಮಲ್ಲಿಯೇ ಚಿಕಿತ್ಸೆಗೆ ಬರುತ್ತಿದ್ದರು. ನಮ್ಮಜ್ಜಿಯ ಮೊಮ್ಮಗ ಹನುಮಂತಪ್ಪ ಒಮ್ಮೆ ತುಮಕೂರಿಗೆ ಬಂದಿದ್ದ. ಆತನನ್ನು ನೋಡಿದ ತಕ್ಷಣ ನನಗೆ ಬಾಲ್ಯದಲ್ಲಿ ಆಲದಕಟ್ಟೆಗೆ ಹೋಗುತ್ತಿದ್ದ ವಿಚಾರ ನೆನಪಿಗೆ ಬಂತು. ನಾನು 'ಹನುಮಂತಪ್ಪ ಏನು ಬೆಳೆಯುತ್ತೀಯಾ' ಎಂದು ಪ್ರಶ್ನೆ ಮಾಡಿದೆ. ಅದಕ್ಕೆ ಆತ 'ಅಯ್ಯೋ ಏನು ಹೇಳಲಿ. ಮಳೇನೆ ಸರಿಯಾಗಿ ಆಗುವುದಿಲ್ಲ. ಇನ್ನು ಯಾವ ಬೆಳೆ ಬರುತ್ತದೆ' ಎಂದರು. ನಾನು 'ಒಂದು ಬೋರ್ ಹಾಕಿಸು' ಎಂದೆ. 'ನಮ್ಮಂತಹವರಿಗೆ ಜಮೀನಿನಲ್ಲಿ ಬೋರ್ ಕೊರೆಸುವುದು ಕನಸಿನ ಮಾತು' ಎಂದರು.

ಆಗ ನಾನು ತುಮಕೂರಿನ ಜಿಲ್ಲಾಸ್ಪತ್ರೆಯಲ್ಲಿ ಅಸಿಸ್ಟೆಂಟ್ ಸರ್ಜನ್ ಆಗಿದ್ದೆ. ನನ್ನ ತಿಂಗಳ ವೇತನ 1500 ರೂ.ಗಳಿರಬಹುದು. ಇದು ನಲವತ್ತು ವರ್ಷದ ಹಿಂದಿನ ಮಾತು. ಯಾವುದೋ ಧೈರ್ಯದ ಮೇಲೆ 'ನಾನು ದುಡ್ಡು ಕೊಡುತ್ತೀನಿ. ನೀನು ಬೋರ್ ತೆಗೆಸು' ಎಂದೆ. ಹೇಗೋ ಹೊಂದಿಸಿ 13 ಸಾವಿರ ರೂ.ಗಳನ್ನು ಕೊಟ್ಟೆ. ಆಮೇಲೆ ಮೋಟಾರ್‌ಗೂ ದುಡ್ಡು ಕೊಟ್ಟ ನೆನಪು.

ಬಂಧುಗಳಾದ ಹನುಮಂತಪ್ಪ ಒಳ್ಳೆಯ ಕೆಲಸಗಾರರು. ಅವರ ಎಲ್ಲಾ ಮಕ್ಕಳು



ತಂದೆಗೆ ಬೆಂಬಲವಾಗಿ ನಿಂತಿದ್ದಾರೆ. ಮೊನ್ನೆ ಬಾಗಲಕೋಟೆಗೆ ಹೋದಾಗ ಬಾದಾಮಿಯ ಮೇಲೆ ಹೋಗಬೇಕಾಯಿತು. ಹನುಮಂತಪ್ಪ ಅವರ ಮಗ ಭರಮಪ್ಪ ನಮ್ಮಲ್ಲಿ ಲ್ಯಾಬ್ ಟೆಕ್ನೀಷಿಯನ್ ಕೋರ್ಸ್ ಮಾಡಿದ್ದರು. ಸ್ವಲ್ಪ ದಿನವಾದ ಮೇಲೆ ತಂದೆಯ ಜೊತೆ ಕೃಷಿ ಕೆಲಸಕ್ಕೆ ನಿಂತರು. ಆತನ ಮಗ ನಮ್ಮಲ್ಲಿ ಈಗ ಬಿ.ಎಸ್‌ಸಿ, ನರ್ಸಿಂಗ್ ಕೋರ್ಸ್ ಮಾಡುತ್ತಿದ್ದಾನೆ. ತಂದೆ-ಮಕ್ಕಳು ಕೃಷಿಯನ್ನು ಅದ್ಭುತವಾಗಿ ಮಾಡಿದ್ದಾರೆ.

ಅವರ ಮನೆಗೆ ಹೋಗಿದ್ದೆ. ಅಲ್ಲಿ ಸಂತೃಪ್ತಿಯ ವಾತಾವರಣವಿತ್ತು. ಮನೆಯಲ್ಲಿ ಆಧುನಿಕ ಉಪಕರಣಗಳಿದ್ದವು. ಹನುಮಂತಪ್ಪ ಅವರಿಗೆ ವಯಸ್ಸಾಗಿದೆ. ನನ್ನ ನೋಡಿದ ತಕ್ಷಣ ಕೃತಜ್ಞತಾಭಾವ ಕಣ್ಣಿನಲ್ಲಿ ಮಿಂಚಿತ್ತು. ಸಣ್ಣ ಮಕ್ಕಳು ಚಟುವಟಿಕೆಯಿಂದ ನೋಡುತ್ತಿದ್ದವು.

ಸ್ವಾತಂತ್ರ್ಯಾನಂತರ ದೇಶದ ನಾಯಕರು ಮತ್ತು ಅಧಿಕಾರಿಗಳು ರೈತರ ಅಭ್ಯುದಯಕ್ಕೆ ದೊಡ್ಡ ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಅದರಲ್ಲಿ ಅನೇಕವು ರೈತರಿಗೆ ಮುಟ್ಟುವುದೇ ಇಲ್ಲ. ಮಧ್ಯವರ್ತಿಗಳೇ ಅದನ್ನು ನುಂಗಿ ನೀರು ಕುಡಿಯುತ್ತಾರೆ. ಭಾರತದ ರೈತ ಸ್ವಭಾವತಃ ಕಷ್ಟಜೀವಿ. ಆತನಿಗೆ ಹೊಲಕ್ಕೆ ನೀರು, ಗೊಬ್ಬರ, ಉತ್ತಮ ಬೀಜ ಮತ್ತು ಬೆಳೆದ ಬೆಳೆಗೆ ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸಿದರೆ ಆತನಿಗೆ ದೊಡ್ಡ ಉಪಕಾರ ಮಾಡಿದಂತೆ ಎನ್ನಬಹುದು. ಇಷ್ಟನ್ನು ಯಾವುದೇ ಸರ್ಕಾರ ಒದಗಿಸಿದರೂ ರೈತ ಸಂತೃಪ್ತಿಯ ಜೀವನ ನಡೆಸುತ್ತಾನೆ.

# ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳ ಆವರಣದಲ್ಲಿ 74ನೇ ಗಣರಾಜ್ಯೋತ್ಸವ

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ಜನವರಿ 26ರಂದು ಜರುಗಿದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಜಂಟಿ ನಿರ್ದೇಶಕರಾದ ಡಾ. ಸಿದ್ದಿಕ್ ಅಹಮದ್ ಭಾಗವಹಿಸಿದ್ದರು. ಅವರು ಮಾತನಾಡುತ್ತಾ "74ನೇ ಗಣರಾಜ್ಯೋತ್ಸವವನ್ನು ಯಶಸ್ವಿಯಾಗಿ ಆಚರಿಸಲಾಗಿದೆ. ನಮ್ಮಲ್ಲಿ ಶೇ 60ಕ್ಕೂ ಹೆಚ್ಚು ಯುವಜನರಿದ್ದು, ಯುವಜನತೆ ಒಗ್ಗೂಡಿ ಕೆಲಸ ಮಾಡಿದರೆ ಏನನ್ನು ಬೇಕಾದರೂ ಸಾಧಿಸಬಹುದು. ನಾವು ನಮ್ಮ ದೇಶಕ್ಕೆ ಸಲ್ಲಿಸುವ ಸೇವೆ ದೇವರ ಸೇವೆ ಎಂದು ಪರಿಗಣಿಸೋಣ. ಯುವಜನರು ದೇಶವನ್ನು ಕಟ್ಟಬೇಕಾದರೆ ಉತ್ತಮ ಶಿಕ್ಷಣ ಪಡೆಯಬೇಕು. ಮೌಲ್ಯಯುತ ಜೀವನ ನಡೆಸಬೇಕು' ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು ತಮ್ಮ ಭಾಷಣದಲ್ಲಿ "ದೇಶದ ಭವಿಷ್ಯವನ್ನು ರೂಪಿಸಲು ಮಕ್ಕಳು ಸುಶಿಕ್ಷಿತರಾಗಬೇಕು, ಆರೋಗ್ಯವಂತರಾಗಬೇಕು, ಸದ್ಗುಣಕಾಯರಾಗಿರಬೇಕು. ಈ ನಿಟ್ಟಿನಲ್ಲಿ ನಾವೆಲ್ಲರೂ ಸೇರಿ ಏಕಭಾವದೊಂದಿಗೆ ದೇಶದ ಪ್ರಗತಿಗಾಗಿ ಶ್ರಮಿಸಬೇಕು, ಸಮಾನತೆಯನ್ನು ಕಾಪಾಡಬೇಕು. ಅಲ್ಲದೆ ಶಾಂತಿ ಮತ್ತು ನೆಮ್ಮದಿಯನ್ನು ಜನರಲ್ಲಿ ಕಾಣಬೇಕು. ನಮ್ಮ ಹಿರಿಯರು ತಂದುಕೊಟ್ಟ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ದೇಶದ ಪ್ರಗತಿಗಾಗಿ ಶ್ರಮಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ ಜೀವ ಸವೆಸಿದ ಅನೇಕ ಗಣ್ಯರನ್ನು ಈ ದಿನ ನೆನೆಯೋಣ. ಸಂವಿಧಾನ ರೂಪಿಸಲು ಡಾ. ಬಾಬು ರಾಜೇಂದ್ರ ಪ್ರಸಾದ್ ಮತ್ತು ಡಾ. ಬಿ.ಆರ್.ಅಂಬೇಡ್ಕರ್‌ರವರ ನೇತೃತ್ವದಲ್ಲಿ ಭಾರತ ಸಂವಿಧಾನ ರಚನಾ ಸಮಿತಿ ರಚಿಸಲಾಯಿತು. ಈ ಸಮಿತಿ ಮಾಡಿದ ಅಪೂರ್ವ ಕೆಲಸವನ್ನು ಯಾರೂ ಮರೆಯಬಾರದು. ಇಂದು ಭಾರತದಲ್ಲಿ ಪ್ರಜಾಪ್ರಭುತ್ವ ಶಕ್ತಿಯುತವಾಗಿದ್ದರೆ, ಸಾಮಾಜಿಕ ನ್ಯಾಯ, ಲಿಂಗಭೇದವಿಲ್ಲದೆ ಎಲ್ಲರಿಗೂ ಮತದಾನದ ಹಕ್ಕು ದೊರಕಿದ್ದರೆ, ಎಲ್ಲಾ ಕ್ಷೇತ್ರಗಳಲ್ಲೂ ಭಾರತದಲ್ಲಿ ಏಕಪ್ರಕಾರದ ಪ್ರಗತಿಯಾಗಿದ್ದರೆ ಅದಕ್ಕೆ ನಮ್ಮ ಸಂವಿಧಾನ ಕಾರಣ" ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ, ತುಮಕೂರಿನಲ್ಲಿ ನೆಲೆಸಿರುವ ನಿವೃತ್ತ ಸೈನಿಕರಾದ ಕೆ.ಕಲ್ಲಪ್ಪರವರು 'ಎಲ್ಲರೂ ಸ್ನೇಹ, ಶಾಂತಿ, ಸೌಹಾರ್ದಯುತವಾಗಿ ಬದುಕಬೇಕು. ಅದೊಂದು ದೇಶಕ್ಕೆ ಸಲ್ಲಿಸುವ ದೊಡ್ಡ ಸೇವೆಯೇ. ನಾನು 1971ರ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಪಾಲ್ಗೊಂಡಿದ್ದೇನೆ. ನಮ್ಮ ದೇಶಕ್ಕೆ ಉತ್ತಮ ಸೇವೆ ಸಲ್ಲಿಸಲು ನನಗೆ ದೊರೆತ ದೊಡ್ಡ ಅವಕಾಶ ಅದು' ಎಂದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್‌ರವರು ಮಾತನಾಡುತ್ತಾ, ದೇಶದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಹಿರಿಯರೆಲ್ಲರನ್ನೂ ಗೌರವಿಸಿ ನಾನಾ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿಶ್ವದ ಮೊದಲನೇ ಸ್ಥಾನಕ್ಕೆ ದೇಶವನ್ನು ಕೊಂಡೊಯ್ಯಲು ನಾವೆಲ್ಲರೂ ಶ್ರಮಿಸೋಣ ಎಂದರು.

▪ ವರದಿ: **ಎನ್.ಆನಂದ**



**ಚಿತ್ರದಲ್ಲಿ ಶ್ರೀದೇವಿ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್.ಹುಲಿನಾಯ್ಕರ್, ಬೆಂಗಳೂರಿನ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಜಂಟಿ ನಿರ್ದೇಶಕರಾದ ಡಾ. ಸಿದ್ದಿಕ್ ಅಹಮದ್, ತುಮಕೂರಿನ ಮಾಜಿ ಸೈನಿಕ ಯೋಧರಾದ ಕೆ.ಕಲ್ಲಪ್ಪ, ಡಾ. ರಮಣ್ ಎಂ. ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಎಂ.ಎಸ್. ಪಾಟೀಲ್, ಅಂಬಿಕಾ ಎಂ. ಹುಲಿನಾಯ್ಕರ್, ಡಾ. ಲಾವಣ್ಯ, ಡಾ. ಎಂ.ಎಲ್.ಹರೇಂದ್ರಕುಮಾರ್, ಟಿ.ವಿ.ಬ್ರಹ್ಮದೇವಯ್ಯ, ಹಾಗೂ ಡಾ. ನರೇಂದ್ರ ವಿಶ್ವನಾಥ್ ಮುಂತಾದವರು ಭಾಗವಹಿಸಿದ್ದರು.**

# ಕ್ಯಾನ್ಸರ್- ಶೀಘ್ರವಾಗಿ ಪತ್ತೆ ಹಚ್ಚಿದರೆ ಜೀವ ಉಳಿಸಬಹುದು

"ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಆಧುನಿಕ ವಿಧಾನದಿಂದ ಶೀಘ್ರವಾಗಿ ಕ್ಯಾನ್ಸರ್‌ನ್ನು ಪತ್ತೆ ಹಚ್ಚುತ್ತಿದೆ. ಆದ್ದರಿಂದ ಶ್ರೀದೇವಿ ಆಸ್ಪತ್ರೆ ಇಂದು (ಜನವರಿ 31. 2022) ಬೃಹತ್ ಪ್ರಮಾಣದಲ್ಲಿ ಕ್ಯಾನ್ಸರ್ ತಪಾಸಣೆಯ ಶಿಬಿರವನ್ನು ಏರ್ಪಡಿಸಿದೆ. ಇಲ್ಲಿ ಕ್ಯಾನ್ಸರ್ ರೋಗದ ಸುಳಿವು ದೊರೆತರೆ ಮುಂದಿನ ಚಿಕಿತ್ಸೆಗಾಗಿ ಅಂತಹವರನ್ನು ಕಿದ್ವಾಯಿ ಆಸ್ಪತ್ರೆಗೆ ಸೇರಿಸಲಾಗುತ್ತದೆ" ಎಂದು ಶ್ರೀದೇವಿ ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ. ರಮಣ್ ಹುಲಿನಾಯ್ಕರ್ ಅಭಿಪ್ರಾಯಪಟ್ಟರು.

"ಕ್ಯಾನ್ಸರ್ ಕಾಯಿಲೆ ಪತ್ತೆಯ ವಿಚಾರದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕಂಡುಬರುವ ಎಲ್ಲಾ ಅನುಮಾನಗಳನ್ನು ಸ್ಥಳದಲ್ಲೇ ಬಗೆಹರಿಸುವ ಪರಿಣಿತಿಯನ್ನು ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆಯ ವೈದ್ಯರು ಹೊಂದಿದ್ದಾರೆ. ವಿದ್ಯಾಭ್ಯಾಸದಲ್ಲಿರುವ ಯುವವೈದ್ಯರು ಮುಂದೆ ವೃತ್ತಿಯ ಸಂದರ್ಭದಲ್ಲಿ ಈ ಶಿಬಿರದಿಂದ ತುಂಬಾ ಪ್ರಯೋಜನ ಪಡೆಯುತ್ತಾರೆ. ಈ ಶಿಬಿರ ವೈದ್ಯಕೀಯ ವಿದ್ಯಾರ್ಥಿಗಳಿಗೆ ವರದಾನ"



ಎಂದು ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ನುಡಿದರು.

'ಈ ದಿನಗಳಲ್ಲಿ ಮಹಿಳೆಯರಿಗೆ ಗರ್ಭಕಂಠದ ಕ್ಯಾನ್ಸರ್ ಸರ್ವೇಸಾಮಾನ್ಯವಾಗಿದ್ದು, ಅದರ ನಿರ್ವಹಣೆಯನ್ನು ವೈದ್ಯರು ಸಮರ್ಪಕವಾಗಿ ಮಾಡಬೇಕಾದ ಅಗತ್ಯವಿದೆ' ಎಂದು ಶ್ರೀದೇವಿ ಆಸ್ಪತ್ರೆಯಲ್ಲಿ ಸ್ತ್ರೀರೋಗ ಮತ್ತು ಪ್ರಸೂತಿತಜ್ಞರು ಹಾಗೂ ಉಪ ಪ್ರಾಂಶುಪಾಲರಾದ ಡಾ. ರೇಖಾ ಗುರುಮೂರ್ತಿ ಅವರು ಅಭಿಪ್ರಾಯಪಟ್ಟರು.

"ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯೊಂದಿಗೆ ಶ್ರೀದೇವಿ ವೈದ್ಯಕೀಯ ಕಾಲೇಜು ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಏರ್ಪಡಿಸಿರುವುದು ಶ್ಲಾಘನೀಯವಾದದ್ದು. ಈ ತಪಾಸಣಾ ಶಿಬಿರದಲ್ಲಿ 200 ಜನರನ್ನು ಪರೀಕ್ಷಿಸಲಾಗಿದೆ. ಅದರಲ್ಲಿ ಮೂವತ್ತರಷ್ಟು ಜನರನ್ನು ಕಿದ್ವಾಯಿ ಆಸ್ಪತ್ರೆಗೆ ದಾಖಲು ಮಾಡಲು ಕ್ರಮ ಕೈಗೊಳ್ಳಲಾಗುವುದು" ಎಂದು ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್. ಪಾಟೀಲ್ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಶಿಬಿರದಲ್ಲಿ ಉಚಿತ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್. ಹೊಟ್ಟೆ, ತಲೆ ಮತ್ತು ಕುತ್ತಿಗೆ, ಸ್ತನ ಕ್ಯಾನ್ಸರ್, ಗರ್ಭಕೋಶದ ಕ್ಯಾನ್ಸರ್, ಮ್ಯಾಮೊಗ್ರಫಿ ಮತ್ತು ಪ್ಯಾಪ್‌ಸ್ಮಿಯರ್ ತಪಾಸಣೆಗಳನ್ನು ಉಚಿತವಾಗಿ ಮಾಡಲಾಯಿತು.

ನೇತ್ರತಜ್ಞೆ ಡಾ. ಲಾವಣ್ಯ ರಮಣ, ಪ್ರಾಂಶುಪಾಲರಾದ ಡಾ. ಎಂ.ಎಲ್. ಹರೇಂದ್ರ ಕುಮಾರ್, ವೈದ್ಯಕೀಯ ಅಧೀಕ್ಷಕ ಡಾ. ಕೆ.ಮೋಹನ್ ಕುಮಾರ್, ಕಿದ್ವಾಯಿ ಸಂಸ್ಥೆಯ ಸರ್ಜಿಕಲ್ ಅಂಕೋಲಾಜಿಸ್ಟ್ ಡಾ. ಸುರೇಂದ್ರ, ತಲೆ ಮತ್ತು ಕುತ್ತಿಗೆ ವಿಭಾಗದ ಡಾ. ವಿಜಯ್ ಅಂಕೋಲಾಜಿಸ್ಟ್ ಡಾ. ಪಲ್ಲವಿ, ಟೆಕ್ನೀಷಿಯನ್ ಶಾಶ್ವತ್, ನರ್ಸಿಂಗ್ ವಿಭಾಗದ ಭಾರತಿ, ನಾಗಮ್ಮ ಹಾಗೂ ಶಿಬಿರದ ಸಂಯೋಜಕರಾದ ಭೀಮರೆಡ್ಡಿ, ಅನಿಲ್ ಮತ್ತು ಸೌಭಾಗ್ಯಮ್ಮ ಅವರುಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.

▪ ವರದಿ: **ಎನ್.ಆನಂದ**

## 1968ರಲ್ಲಿ ಕೆಎಂಸಿ ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳ ಸಮಾವೇಶ



ಚಿತ್ರ ಎಡಗಡೆಯಿಂದ: ಡಾ. ಜಯಂತಿ, ಡಾ. ಈರಮ್ಮ ಪಾಟೀಲ್, ಡಾ. ಶಾಮಲಾ ವಾರಣಾಸಿ, ಡಾ. ತ್ರಿಶೂಲ ಜೋಷಿ, ಡಾ. ಶೋಭಾ ಇಟಗಿ, ಡಾ. ಬಿ.ಕೆ.ಬಾವಿ, ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಡಾ. ಮಹಾದೇವಿ ಸೋಲಶಿ, ಡಾ. ನೀಲಮ್ಮ ಇನಾಮತಿ, ಡಾ. ದಾಕ್ಷಿಯಿಣಿ ವಸಂತ, ಡಾ. ಭುವನೇಶ್ವರಿ ಸಾಸನೂರು, ಡಾ. ಪ್ರೇಮಲತಾ ಪಾಟೀಲ್, ಡಾ. ಉಷಾ ವಾಸುನಕರ್,
ನಿಂತವರು ಎಡಗಡೆಯಿಂದ: ಡಾ. ಎಂ.ವೆಂಕಟೇಶ್, ಡಾ. ಬಿ.ಎ.ತಂಗಾ, ಡಾ. ಸಿದ್ಧಣ್ಣ ಸುಲ್ತಾನಪುರ್, ಡಾ. ಆರ್.ಎನ್.ಪಾಟೀಲ್, ಡಾ. ಎಸ್.ಜಿ.ಹಿರೇಮಠ, ಡಾ. ಶ್ರೀಕಾಂತ ಗಾರ್ಗಿ, ಡಾ. ಅಶೋಕ ಗೋಧಿ, ಡಾ. ಎಂ.ಆರ್. ಹುಲಿನಾಯ್ಕರ್, ಡಾ. ಮಲಕಪ್ಪ ಅಧಿಕಾರಿ, ಡಾ. ಎಸ್.ಎಸ್.ನಂದಗುಡಿ, ಡಾ. ಎನ್.ಬಿ.ನಿಂಬಣ್ಣನವರ್, ಡಾ. ಟಿ.ಎಚ್. ಮುಲ್ಲಾ, ಡಾ. ಸಿ.ವಸಂತ, ಡಾ. ಜಿ.ಜಿ.ಹಿರೇಮಠ, ಡಾ. ಭೋಜರಾಜ್ ಮುಳಬಾಗಿಲು ಹಾಗೂ ಡಾ. ಎನ್.ವಿ.ಬನ್ನಿ.
ಮೂರನೆಯ ಸಾಲಿನಲ್ಲಿರುವವರು: ಡಾ. ಎಂ.ಎಚ್. ಕುಲಕರ್ಣಿ, ಡಾ. ಸುಧೀಂದ್ರ ಕುಲಕರ್ಣಿ, ಡಾ. ಬಾಲು ಕಮಲಾಪುರಕರ್, ಡಾ. ರವಿ ವಿಭೂತಿ, ಡಾ. ಡಿ.ಎಚ್.ಪಾಟೀಲ್ ಡಾ. ಸಿ.ಎಸ್.ಕೊಟ್ಟೂರು, ಡಾ. ಸುಹಾಸ ಕುಲಕರ್ಣಿ, ಡಾ. ಸಿ.ವಿ.ಬಾಳೇಕಾಯಿ, ಡಾ. ಜಿ.ಜಿ.ಬೆಟ್ಟಗೇರಿ ಮತ್ತು ಡಾ. ಕೆ.ವಿ.ಅಚ್ಯುತ.

# ಬಾಗಲಕೋಟೆಯಲ್ಲಿ 1968ರ ಎಂಬಿಬಿಎಸ್ ಸಹಪಾಠಿಗಳ ಮಿಲನ

■ **ಡಾ. ಎಂ.ಆರ್. ಹುಲಿನಾಯ್ಕರ್**

ಕನ್ನಡದ ಪ್ರಸಿದ್ಧ ಬರಹಗಾರರಾದ ಡಾ. ಹಾ.ಮಾ.ನಾಯಕ ತಮ್ಮ ಅಂಕಣ ಬರಹದಲ್ಲಿ ಒಂದು ಮಾತು ಬರೆಯುತ್ತಾರೆ. ಅವರ ಪ್ರಕಾರ "ಒಳ್ಳೆಯ ಪರಿಸರದ ಶಾಲೆ, ಬೋಧನೆಯಲ್ಲಿ ಪ್ರೀತಿಯುಳ್ಳ ಸಮರ್ಥ ಅಧ್ಯಾಪಕರು, ಸುಸಜ್ಜಿತವಾದ ಗ್ರಂಥಾಲಯ, ಪ್ರಯೋಗಾಲಯ, ಆಕರ್ಷಕವಾದ ಪಠ್ಯಪುಸ್ತಕಗಳು – ಇವೇ ಶಿಕ್ಷಣದ ಆಧಾರ". ಈ ಎಲ್ಲಾ ಸೌಲಭ್ಯಗಳು 1968ರಲ್ಲಿ ನಾನು ಹುಬ್ಬಳ್ಳಿಯ ಕೆ.ಎಂ.ಸಿ. ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರಬೇಕಾದರೆ ದೊರೆತ ಸೌಲಭ್ಯಗಳು. ಡಾ. ಹಾ.ಮಾ.ನಾಯಕರ ಮಾತಿನ ಜೊತೆ ನಾನೊಂದು ವಿಷಯವನ್ನು ಸೇರಿಸುತ್ತೇನೆ. ಬೌದ್ಧಿಕವಾಗಿ ನನಗೆ ಪ್ರೇರಣೆ ಕೊಡುತ್ತಾ, ವಿದ್ಯಾರ್ಥಿ ಜೀವನದ ಅಮೂಲ್ಯ ಕ್ಷಣಗಳನ್ನು ಕಳೆಯಲು ಕಾರಣರಾದ, ವ್ಯಾಸಂಗದ ನಂತರವೂ ತಮ್ಮ ಬಲವಾದ ಪ್ರೀತಿಯಿಂದ ನನ್ನನ್ನು ಬಂಧಿಸಿರುವ ಆ ಸಹಪಾಠಿಗಳನ್ನು ಎಂದಿಗೂ ಮರೆಯುವುದಕ್ಕೆ ಸಾಧ್ಯವಿಲ್ಲ. ವಿದ್ಯಾರ್ಥಿ ಜೀವನದಲ್ಲಿ ದೊರೆಯುವ ಸಹಪಾಠಿಗಳು ಮತ್ತು ಮಿತ್ರರು ನಿಮ್ಮ ಬದುಕಿನುದ್ದಕ್ಕೂ ಜೊತೆಯಾಗಿರುತ್ತಾರೆ. ಅದು ಸಹ ಶಿಕ್ಷಣದಿಂದಾಗುವ ವೈಯಕ್ತಿಕ ಲಾಭ.

ಐವತ್ತೆರಡು ವರ್ಷಗಳ ಹಿಂದೆ ನಾನು ಎಂ.ಬಿ.ಬಿ.ಎಸ್ ಮಾಡಿದವನು. ನಾನು ಕನಸುಮನಸ್ಸಿನಲ್ಲೂ ಊಹಿಸದ ರೀತಿ ನನಗೆ ಎಂ.ಬಿ.ಬಿ.ಎಸ್. ಮಾಡುವ ಅವಕಾಶ ದೊರೆಯಿತು. ಇದೊಂದು ಪವಾಡವೆಂದರೆ ತಪ್ಪಿಲ್ಲ. ನಮ್ಮ ಮನೆಯಲ್ಲಿ ಶಾಲಾ ಶಿಕ್ಷಣ ಪಡೆದ ಮೊದಲ ವ್ಯಕ್ತಿ ನಾನು. ಗುರುಗಳ ಕೃಪೆಯಿಂದ ಒಂದೊಂದೇ ಮೆಟ್ಟಿಲನ್ನು ಹತ್ತುತ್ತಾ ಹೋಗಿ ಈ ಹಂತ ತಲುಪಿದ್ದೇನೆ. ಬದುಕಿನಲ್ಲಿ ಸಿಕ್ಕಿರುವ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ಎಂ.ಬಿ.ಬಿ.ಎಸ್‌ಗೆ ಸೇರ್ಪಡೆಯಾದ ದಿನದಿಂದಲೇ ತೀರ್ಮಾನ ಮಾಡಿದ್ದೆ. ಆಗ ಎಂ.ಬಿ.ಬಿ.ಎಸ್‌ಗೆ ಸೇರುತ್ತಿದ್ದವರು ಶಿಕ್ಷಕರ ಮತ್ತು ಸರ್ಕಾರಿ ನೌಕರರ ಮಕ್ಕಳು. ಅವರೆಲ್ಲಾ ಪ್ರತಿಭಾವಂತ ವಿದ್ಯಾರ್ಥಿಗಳು. ನಮಗೆ ಯಾರಿಗೂ ನಮ್ಮನ್ನು ಬಾಧಿಸುತ್ತಿದ್ದ ದೈನಂದಿನ ಸಮಸ್ಯೆಗಳ ಬಗ್ಗೆ ಅಷ್ಟು ಲಕ್ಷ್ಯವಿರಲಿಲ್ಲ. ಪ್ರತಿ ಘಂಟೆಯೂ ವೈದ್ಯಕೀಯ ವಿಷಯಗಳ ಬಗ್ಗೆ ಮಾತನಾಡುತ್ತಿದ್ದೆವು. ನಮ್ಮ ಅಧ್ಯಾಪಕರು ಅಂತಹವರಿದ್ದರು. ಈ ಕಾರಣಕ್ಕಾಗಿ ಹುಬ್ಬಳ್ಳಿಯ ಕೆ.ಎಂ.ಸಿ. ಮೆಡಿಕಲ್ ಕಾಲೇಜಿನ ಇತಿಹಾಸದಲ್ಲಿ 1968ರ ಬ್ಯಾಚ್ ಎಂದರೆ ಎಲ್ಲರಿಗೂ ಅಚ್ಚುಮೆಚ್ಚು. ಆ ಬ್ಯಾಚ್‌ನಲ್ಲಿ 150 ವಿದ್ಯಾರ್ಥಿಗಳಿದ್ದರು. ಪ್ರತಿಯೊಬ್ಬರೂ ಅಕಾಡೆಮಿಕ್ ಆಗಿ ಉನ್ನತಸ್ತರದಲ್ಲಿದ್ದರು. ಬಹತೇಕರು ನಂತರ ಪಿ.ಜಿ. ಮಾಡಿದರು. ಎಲ್ಲರೂ ವೃತ್ತಿಯಲ್ಲಿ ಅನನ್ಯ ಶ್ರದ್ಧೆಯನ್ನು ಅಳವಡಿಸಿಕೊಂಡ ಕಾರಣ ಅಪೂರ್ವ ಸಾಧನೆ ಮಾಡಿದ್ದಾರೆ.

'1990ರಲ್ಲಿ ಈ ಬ್ಯಾಚ್‌ನ ಕೆಲವು ಮಿತ್ರರು ವರ್ಷಕ್ಕೊಮ್ಮೆ ನಾವೆಲ್ಲಾ ಸೇರಿ ಬದುಕಿನ ಆಗುಹೋಗು ಮತ್ತು ವೃತ್ತಿಯಲ್ಲಿ ಆಗುತ್ತಿರುವ ಬೆಳವಣಿಗೆ ಕುರಿತು ಚರ್ಚಿಸೋಣ' ಎಂದರು. ಆಗಿನಿಂದ ಕೆ.ಎಂ.ಸಿ. ವೈದ್ಯಕೀಯ ಕಾಲೇಜಿನ 1968ರ ಬ್ಯಾಚ್‌ನ ಸಹಪಾಠಿಗಳು ಒಂದೆಡೆ ಸೇರುವ ಪರಿಪಾಟ ಬೆಳೆಸಿಕೊಂಡು ಬಂದಿದ್ದೇವೆ. 2015ರಲ್ಲಿ ತುಮಕೂರಿನ ದೇವರಾಯನದುರ್ಗದಲ್ಲಿ ನಾವುಗಳು ಸೇರಿದ್ದೆವು. ಪ್ರತಿವರ್ಷ ಬೇರೆ ಬೇರೆ ಊರಿನಲ್ಲಿ ಸೇರುತ್ತಿದ್ದೇವೆ. ನಮ್ಮ ಅನೇಕ ಸಹಪಾಠಿಗಳು ವಿದೇಶದಲ್ಲಿದ್ದಾರೆ.

**ಹೀಗೆ ವೈದ್ಯಕೀಯ ಕ್ಷೇತ್ರದ ಸಂಶೋಧನೆಗಳ ಬಗ್ಗೆ ಚರ್ಚೆ ಮಾಡಿದೆವು. ನನಗೆ ಅತ್ಯಂತ ಖುಷಿ ಸಂಗತಿಯೆಂದರೆ, ನನ್ನೆಲ್ಲಾ ಸಹಪಾಠಿಗಳು ವೈದ್ಯಕೀಯ ಕ್ಷೇತ್ರದ ಸಂಶೋಧನೆಗಳ ಬಗೆಗೆ ಅಪಾರ ಜ್ಞಾನ ಹೊಂದಿರುವುದು. ಚರ್ಚೆಯ ಸಂದರ್ಭದಲ್ಲಿ ಎಲ್ಲರೂ ಒಂದೊಂದು ವಿಷಯದ ಬಗೆಗೆ ಬೆಳಕು ಚೆಲ್ಲುತ್ತಿದ್ದರು.**

ಪ್ರತಿವರ್ಷ ನಾವು ಸೇರುವ ವಿಚಾರ ತಿಳಿದು ಕೆಲವರು ಈ ಸಂದರ್ಭಕ್ಕೆ ಹೇಗೋ ಹೊಂದಿಸಿಕೊಂಡು ಬರುತ್ತಾರೆ.

2023ರಲ್ಲಿ 1968ರ ಬ್ಯಾಚ್‌ನ್ನು ಬಾಗಲಕೋಟೆಯಲ್ಲಿ ಸಮ್ಮಿಲನ ಮಾಡಿಸುವ ಜವಾಬ್ದಾರಿಯನ್ನು ಮಿತ್ರರು ವಹಿಸಿಕೊಂಡಿದ್ದರು. ಅವರಲ್ಲಿ ಡಾ. ಬಿ.ಕೆ. ಬಾವಿ ಮತ್ತು ಡಾ. ಎಸ್.ವಿ. ಬನ್ನಿ ಅತ್ಯಂತ ಪ್ರಮುಖರು. ಬಾಗಲಕೋಟೆಯ ಕಾಂತಿ ರೆಸಾರ್ಟ್‌ನಲ್ಲಿ ಜನವರಿ 19–20ರಂದು ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ನಲವತ್ತಕ್ಕೂ ಹೆಚ್ಚಿನ ಸಹಪಾಠಿಗಳು ತಮ್ಮ ಕುಟುಂಬದ ಜೊತೆ ಆಗಮಿಸಿದ್ದರು. ಬೆಂಗಳೂರಿನ ಗುರು ನರ್ಸಿಂಗ್ ಹೋಂನ ಡಾ. ಶೋಭಾ ಇಟಗಿ, ಡಾ. ಸುವರ್ಣ ಚೌಧುರಿ, ಡಾ. ಸಾಸನೂರು, ಡಾ. ತಾಂಡವೇಶ್ವರ, ಕೆ.ಎಂ.ಸಿ.ಯಲ್ಲಿ ಪ್ರಾಧ್ಯಾಪಕರಾಗಿದ್ದ ಡಾ. ಎಂ.ಎಚ್. ಕುಲಕರ್ಣಿ, ಮಕ್ಕಳ ರೋಗದಲ್ಲಿ ತಜ್ಞತೆ ಪಡೆದಿರುವ ಡಾ. ಕೆ.ವಿ.ಅಚ್ಯುತನ್, ಸ್ತ್ರೀರೋಗತಜ್ಞೆಯರಾದ ಡಾ. ಪ್ರೇಮಲತಾ ಪಾಟೀಲ್, ಡಾ. ಈರಮ್ಮ ಪಾಟೀಲ್, ಡಾ. ನೀಲಾ ಬಿರಾದಾರ, ಇಂಗ್ಲೆಂಡ್‌ನಲ್ಲಿ ವೈದ್ಯರಾಗಿರುವ ಡಾ. ಚಿಂತಾಹರಣ ಕೊಟ್ಟೂರು, ಕೊಪ್ಪಳದಲ್ಲಿ ಡಿಎಚ್‌ಓ ಆಗಿದ್ದ ಡಾ. ಮುಲ್ಲಾ, ಬೆಳಗಾವಿ ಜವಾಹರಲಾಲ್ ನೆಹರೂ ವೈದ್ಯಕೀಯ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದ ಡಾ. ಅಶೋಕ ಗೋಧಿ, ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಮಕ್ಕಳ ಹೃದಯ ತಜ್ಞರಾಗಿದ್ದ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಮಕ್ಕಳ ರೋಗತಜ್ಞ ಡಾ. ನಿಂಬಣ್ಣ, ವಿದೇಶದಲ್ಲಿರುವ ಡಾ. ರವಿ ವಿಭೂತಿ ಮೊದಲಾದವರನ್ನು ಕಾಣುವ, ಮಾತನಾಡುವ ಭಾಗ್ಯ ನನಗೆ ದೊರೆಯಿತು. ಅಲ್ಲಿದ್ದ ಅನೇಕರಿಗೆ ಎಪ್ಪತ್ತು ವರ್ಷ ದಾಟಿದೆ. ತಾವು ಪ್ರಾರಂಭಿಸಿದ ನರ್ಸಿಂಗ್ ಹೋಂನ ಜವಾಬ್ದಾರಿ ತಮ್ಮವರಿಗೆ ಕೊಟ್ಟಿದ್ದಾರೆ. ಸರ್ಕಾರಿ ನೌಕರಿಯಲ್ಲಿದ್ದವರು ನಿವೃತ್ತರಾಗಿದ್ದಾರೆ. ಕೆಲವರು ಈಗಲೂ ಪೇಶೆಂಟ್‌ಗಳನ್ನು ನೋಡುತ್ತಾರೆ. ಹೆಚ್ಚು ಕಡಿಮೆ ಎಲ್ಲರ ಮಕ್ಕಳು ವೈದ್ಯಕೀಯ ವೃತ್ತಿಯನ್ನೇ ಆರಿಸಿಕೊಂಡಿದ್ದಾರೆ. ಕೆಲವರನ್ನು ಹೊರತುಪಡಿಸಿ ಎಲ್ಲರದೂ ಸುಖೀಜೀವನ. ಕಳೆದ ವರ್ಷದ ನಂತರ ವೈಯಕ್ತಿಕ ಜೀವನದಲ್ಲಿ ಆಗಿರುವ ಬದಲಾವಣೆ ಇತರೆ ಕಷ್ಟಸುಖಗಳನ್ನು ಪರಸ್ಪರ ಹಂಚಿಕೊಂಡೆವು.

ನನ್ನ ಸಹಪಾಠಿಗಳಿಗೆ ವೈದ್ಯಕೀಯ ವೃತ್ತಿ ಕುರಿತಂತೆ ಉತ್ತಮ ಅನುಭವವಿದೆ. ಈಗ್ಗೆ ಐವತ್ತು ವರ್ಷಗಳ ಹಿಂದೆ ಗ್ರಾಮೀಣ ಅಥವಾ ನಗರ ಪ್ರದೇಶಗಳಲ್ಲೂ ವೈದ್ಯರ ಅಭಾವ ತೀವ್ರವಾಗಿತ್ತು. ತಲೆಯಿಂದ ಪಾದದವರೆಗೆ ಒಬ್ಬರೇ ವೈದ್ಯರಿರುತ್ತಿದ್ದರು. ಅಂತಹ ಸನ್ನಿವೇಶದಲ್ಲಿ ಕೆಲಸ ಮಾಡಿದ ವೈದ್ಯರಿಗೆ ಸಹಜವಾಗಿ ಉತ್ತಮ ಅನುಭವವಿರುತ್ತದೆ. ಬದುಕಿನಲ್ಲಿ ವಿಶ್ರಾಂತಿ ಪಡೆಯದೇ ಕೆಲಸ ಮಾಡಿದ ಅನೇಕರಿದ್ದಾರೆ. ಡಾ. ಅಶೋಕ ಗೋಧಿಯಂತಹವರು ವೈದ್ಯಕೀಯ ಶಿಕ್ಷಣ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿರುತ್ತಾರೆ.

ಆ ಕಾಲದ ವೈದ್ಯಕೀಯ ಕ್ಷೇತ್ರಕ್ಕೂ ಈಗಿನ ವೈದ್ಯಕೀಯ ಕ್ಷೇತ್ರಕ್ಕೂ ಅಜಗಜಾಂತರ ಇದೆ. ವೈದ್ಯಕೀಯ ಕ್ಷೇತ್ರದಲ್ಲಿ ನಡೆದ ಸಂಶೋಧನೆಗಳಿಂದಾಗಿ ವೈದ್ಯರು ಪೇಶೆಂಟ್‌ಗಳ ನಿರೀಕ್ಷೆಯಂತೆ ಕೆಲಸ ಮಾಡಲು ಈಗ ಸಾಧ್ಯವಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಾದ ಕ್ರಾಂತಿಯನ್ನು ವೈದ್ಯಕೀಯ ಕ್ಷೇತ್ರ ಸಮರ್ಪಕವಾಗಿ ಬಳಸಿಕೊಂಡಿದೆ. ಈಗ ಟೆಲಿಮೆಡಿಸಿನ್ ಹೆಚ್ಚು ಜನಪ್ರಿಯವಾಗುತ್ತಿದೆ. ಕೋವಿಡ್–19ರ ಸಂದರ್ಭದಲ್ಲಿ ಇದರ ಪ್ರಾಮುಖ್ಯತೆ ಮತ್ತಷ್ಟು ಹೆಚ್ಚಿತು. ಪ್ರಪಂಚದ ಯಾವುದೇ ಮೂಲೆಯಲ್ಲಿರುವ ವೈದ್ಯರನ್ನು ಪೇಶೆಂಟ್ ಈಗ ಆನ್‌ಲೈನ್ ಮೂಲಕ ಸಂಪರ್ಕಿಸಲು ಸಾಧ್ಯವಿದೆ. Artificial Intelligence ಅಂದರೆ ಕೃತಕ ಬುದ್ಧಿಮತ್ತೆಯ ಸಹಾಯದಿಂದ ವೈದ್ಯಕೀಯ ಲೋಕದಲ್ಲಿ ಕ್ರಾಂತಿಯನ್ನೇ ಮಾಡಲಾಗಿದೆ. ಇಮ್ಯುನೊ ಥೆರಪಿ (Immuno therapy) ವೈದ್ಯಕೀಯ ಕ್ಷೇತ್ರದ ಮತ್ತೊಂದು ಕ್ರಾಂತಿಕಾರಕ ಆವಿಷ್ಕಾರ. ಕ್ಯಾನ್ಸರ್ ಕಾಯಿಲೆಗೆ ತುತ್ತಾದವರಿಗೆ ಕಿಮೋಥೆರಪಿ ಕೊಡುವುದು ಸಾಮಾನ್ಯ. ಇದರಿಂದ ಪೇಶೆಂಟ್‌ನ ದೇಹದಲ್ಲಿದ್ದ ಕ್ಯಾನ್ಸರ್ ಕಣಗಳು ಮಾತ್ರ ನಾಶವಾಗುವುದಿಲ್ಲ, ಉತ್ತಮ ಜೀವಕೋಶಗಳೂ ನಾಶವಾಗುತ್ತವೆ. ಕಿಮೋಥೆರಪಿಯಿಂದ ಪೇಶೆಂಟ್ ಅಡ್ಡ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಈಗ ಜೆನೆಟಿಕ್ ತಂತ್ರಜ್ಞಾನದ ಬೆಳವಣಿಗೆಯಾಗಿದೆ. ಕ್ಯಾನ್ಸರ್ ಪೇಶೆಂಟ್‌ನ ದೇಹದಿಂದ ಒಂದು ಸೆಲ್ ತೆಗೆದು ಅದನ್ನು ಆವಿಷ್ಕರಿಸಿ ಮತ್ತೆ ಅದೇ ದೇಹದೊಳಗೆ ಇಂಜಕ್ಷನ್ ಮೂಲಕ ರವಾನಿಸುತ್ತಾರೆ. ಪರಿಷ್ಕೃತಗೊಂಡ ಸೆಲ್ ಪೇಶೆಂಟ್‌ನ ಕ್ಯಾನ್ಸರ್ ಕಣಗಳನ್ನು ಮಾತ್ರ ಕೊಲ್ಲುತ್ತದೆ. ಅವನ ಶುದ್ಧ ಜೀವಕೋಶಗಳು ತಂಟೆಗೆ ಬರುವುದಿಲ್ಲ. ಇಂದು ಲೆಪ್ರೊಸ್ಕೋಪಿಕ್ ಮತ್ತು ರೊಬೊಟಿಕ್ ಸರ್ಜರಿಗಳು ಪ್ರಸಿದ್ಧವಾಗಿವೆ. ನಮ್ಮ ಮಗಳು ಡಾ, ಭವಾನಿ ಸ್ಟಾಲಿನ್ ಇಂತಹ ಶಸ್ತ್ರಚಿಕಿತ್ಸೆ ಮಾಡುವುದರಲ್ಲಿ ಪರಿಣತಿ ಸಾಧಿಸಿದ್ದಾಳೆ.

3ಡಿ ಪ್ರಿಂಟಿಂಗ್ ಹೊಸ ಆವಿಷ್ಕಾರದ ಸಹಾಯದಿಂದ ವ್ಯಕ್ತಿಯ ಕಾಯಿಲೆಗೆ ಅನುಸಾರವಾಗಿ ಚಿಕಿತ್ಸೆ ಮಾಡಬಹುದಾಗಿದೆ. ಹಿಂದೆ ವೈದ್ಯರು ತಮ್ಮ ಅನುಭವದ ಮೇಲೆ ಶಸ್ತ್ರಚಿಕಿತ್ಸೆ ಮಾಡುತ್ತಿದ್ದರು. ಈಗ ಹಾಗಲ್ಲ. ಆಧುನಿಕ ವೈದ್ಯಕೀಯ ಉಪಕರಣಗಳಿಂದಾಗಿ ಅತ್ಯಂತ ಕರಾರುವಕ್ಕಾಗಿ ಚಿಕಿತ್ಸೆ ನೀಡಬಹುದಾಗಿದೆ. ಹೃದಯಕ್ಕೆ ರಕ್ತಪರಿಚಲನೆಯಲ್ಲಿ ತೊಂದರೆಯಾದರೆ ಸ್ಟೆಂಟ್ ಹಾಕುತ್ತಿದ್ದರು. ಮೆದುಳಿನಲ್ಲಿ ರಕ್ತ ಪರಿಚಲನೆಯಲ್ಲಿ ಅಡಚಣೆಯಾದರೆ ಮಿದುಳಿನ ಆಘಾತವಾಗುತ್ತದೆ. ಅಲ್ಲಿಗೂ ಸ್ಟೆಂಟ್ ಹಾಕುವ ಪದ್ಧತಿ ಮೆದುಳಿನ ಶಸ್ತ್ರಚಿಕಿತ್ಸೆಯಲ್ಲಿ ರೂಢಿಗೆ ಬಂದಿದೆ. ನ್ಯಾನೋ ಮೆಡಿಸನ್ ಹೆಚ್ಚು ಜನಪ್ರಿಯವಾಗುತ್ತಿದೆ. ಸೂಕ್ಷ್ಮಕಣಗಳಾಗಿಸಿ ಔಷಧವನ್ನು ದೇಹಕ್ಕೆ ರವಾನಿಸಬಹುದು.

ಹೀಗೆ ವೈದ್ಯಕೀಯ ಕ್ಷೇತ್ರದ ಸಂಶೋಧನೆಗಳ ಬಗ್ಗೆ ಚರ್ಚೆ ಮಾಡಿದೆವು. ನನಗೆ ಅತ್ಯಂತ ಖುಷಿ ಸಂಗತಿಯೆಂದರೆ, ನನ್ನೆಲ್ಲಾ ಸಹಪಾಠಿಗಳು ವೈದ್ಯಕೀಯ ಕ್ಷೇತ್ರದ ಸಂಶೋಧನೆಗಳ ಬಗೆಗೆ ಅಪಾರ ಜ್ಞಾನ ಹೊಂದಿರುವುದು. ಚರ್ಚೆಯ ಸಂದರ್ಭದಲ್ಲಿ ಎಲ್ಲರೂ ಒಂದೊಂದು ವಿಷಯದ ಬಗೆಗೆ ಬೆಳಕು ಚೆಲ್ಲುತ್ತಿದ್ದರು. ಅದೊಂದು ಮರೆಯಲಾಗದ ದಿನ. ನಮ್ಮ ಸಂಸ್ಥೆ ಈ ವರ್ಷದಲ್ಲಿ ತಂದಿದ್ದ ಹೊಸ ಡೈರಿ ಮತ್ತು ಕ್ಯಾಲೆಂಡರ್‌ನ್ನು ಪ್ರತಿಯೊಬ್ಬರಿಗೂ ನೀಡಿದೆ. ಅವರಿಗೆ ಸಂತೋಷವಾಯಿತು. ಮುಂದಿನ ವರ್ಷದ ಮಿಲನಕ್ಕೆ ಮನಸ್ಸು ಕಾತರಿಸುತ್ತಿದೆ.

# ಶ್ರೀದೇವಿ ಆಸ್ಪತ್ರೆ ಚರ್ಮರೋಗ ವಿಭಾಗದಿಂದ ಸಿಎಂಇ ಕಾರ್ಯಾಗಾರ

"ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರ ಮತ್ತು ವೈಜ್ಞಾನಿಕ ಬೆಳವಣಿಗೆಗಳಾಗುತ್ತಿದ್ದು, ಚರ್ಮರೋಗಕ್ಕೆ ಸಂಬಂಧಪಟ್ಟಂತೆ ವೈದ್ಯಕೀಯ ಕ್ಷೇತ್ರದಲ್ಲಿ ಅಪೂರ್ವ ತಂತ್ರಜ್ಞಾನದ ಬೆಳವಣಿಗೆಯಾಗಿದೆ. ಸಾರ್ವಜನಿಕರಿಗೆ ಇದರ ಅರಿವು ಮೂಡಿಸುವ ಅಗತ್ಯವಿದೆ, ಚರ್ಮರೋಗಕ್ಕೆ ವೈದ್ಯಶಾಸ್ತ್ರದಲ್ಲಿ ಕೇವಲ ಔಷಧೋಪಚಾರವೊಂದೇ ಪರಿಹಾರವಲ್ಲ, ಹಲವು ಶಸ್ತ್ರಚಿಕಿತ್ಸೆಗಳನ್ನು ನಡೆಸಬಹುದು ಎಂದು ಇತ್ತೀಚಿನ ಸಂಶೋಧನೆಗಳು ಹೇಳುತ್ತವೆ. ವಿಶೇಷ ಉಪಕರಣಗಳನ್ನು ಬಳಸಿಕೊಂಡು ವಿವಿಧ ಚಿಕಿತ್ಸಾ ವಿಧಾನಗಳನ್ನು ಚರ್ಮರೋಗ ವಿಭಾಗದಲ್ಲಿ ಅಳವಡಿಸಲಾಗಿದೆ. ಇದು ನೂತನ ಆವಿಷ್ಕಾರ ಮತ್ತು ತಂತ್ರಜ್ಞತೆಯನ್ನೊಳಗೊಂಡಿದೆ. ನಮ್ಮ ವೈದ್ಯಕೀಯ ಕಾಲೇಜಿನ ಚರ್ಮರೋಗ ವಿಭಾಗ ಅವುಗಳ ಸದುಪಯೋಗ ಪಡೆದುಕೊಳ್ಳಬೇಕು. ವೈದ್ಯಕೀಯ ಶಿಕ್ಷಣ ವ್ಯವಸ್ಥೆಯಲ್ಲಿ ನಿರಂತರವಾದ ಸಂಶೋಧನೆಗಳಾಗುತ್ತಿದ್ದು ಅದನ್ನು ಅತ್ಯುತ್ತಮ ರೀತಿಯಲ್ಲಿ ಬಳಸಿಕೊಳ್ಳಬೇಕು. ನಮ್ಮ ದೈನಂದಿನ ಕೆಲಸಗಳ ಮಧ್ಯೆ ವೈದ್ಯರು ಪ್ರಚಲಿತ ಚರ್ಮರೋಗದ ಬಗ್ಗೆ ರೋಗಿಗಳಲ್ಲಿ ಅರಿವು ಮೂಡಿಸಬೇಕು. ಇದಕ್ಕಾಗಿ ವೈದ್ಯ ಸಮುದಾಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತದೆ. ನಮ್ಮ ಸಂಸ್ಥೆಯಲ್ಲಿ ಅತ್ಯಂತ ಸುಸಜ್ಜಿತ ಸ್ಕಿಲ್‌ಲ್ಯಾಬ್ ಲಭ್ಯವಿರುತ್ತದೆ. ಅದೊಂದು ಪ್ರತ್ಯೇಕ ವಿಭಾಗವಾಗಿದೆ. ಅದರ ಉಪಯೋಗವನ್ನು ವೈದ್ಯರು, ಬೋಧಕ ಸಿಬ್ಬಂದಿ, ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳು ಪಡೆಯಬಹುದಾಗಿದೆ" ಎಂದು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್‌ರವರು ತಿಳಿಸಿದರು.




ಚಿತ್ರದಲ್ಲಿ ಡಾ. ರಮಣ್ ಎಂ. ಹುಲಿನಾಯ್ಕರ್, ಚಿಕ್ಕಮಗಳೂರಿನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್ ಮತ್ತು ನಿರ್ದೇಶಕರಾದ ಡಾ. ಎಂ.ಆರ್.ಹರೀಶ್, ಎಂ.ಎಸ್.ಪಾಟೀಲ್, ಟ್ರಸ್ಟಿ ಅಂಬಿಕಾ ಎಂ. ಹುಲಿನಾಯ್ಕರ್, ನೇತ್ರತಜ್ಞರಾದ ಡಾ. ಲಾವಣ್ಯ, ವೈದ್ಯಕೀಯ ಅಧೀಕ್ಷಕರಾದ ಡಾ. ಮೋಹನ್ ಕುಮಾರ್, ಶ್ರೀದೇವಿ ಆಸ್ಪತ್ರೆಯ ಚರ್ಮರೋಗ ವಿಭಾಗದ ಮುಖ್ಯಸ್ಥರಾದ ಡಾ. ಪ್ರದೀಪ್‌ಪ್ರಭು ಮುಂತಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಚಿಕ್ಕಮಗಳೂರಿನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್ ಮತ್ತು ನಿರ್ದೇಶಕರಾದ ಡಾ. ಎಂ.ಆರ್.ಹರೀಶ್ ಅವರು "ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಚರ್ಮರೋಗ ವಿಭಾಗವು ಅತ್ಯುತ್ತಮ ವಿಭಾಗವಾಗಿ ಹೊರಹೊಮ್ಮುತ್ತಿದೆ. ಈ ವಿಭಾಗಕ್ಕೆ ಸೇರುವ ಸ್ನಾತಕೋತ್ತರ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ, ನೂತನ ಚಿಕಿತ್ಸಾ ಪದ್ಧತಿಗಳು ಪ್ರಾರಂಭವಾಗಿವೆ. ಇಂತಹ ಸಂದರ್ಭದಲ್ಲಿ ಚರ್ಮರೋಗದಲ್ಲಿ ತಜ್ಞತೆ ಅತಿ ಪ್ರಮುಖ ಪಾತ್ರ ವಹಿಸುತ್ತದೆ. ಹೊಸ ಹೊಸ ಚಿಕಿತ್ಸಾ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ. ಈ ವಿಭಾಗವು ಇತ್ತೀಚಿನ ದಿನಗಳಲ್ಲಿ ಪ್ರಾಮುಖ್ಯತೆಯನ್ನು ಹೊಂದಲು ಹಲವಾರು ಕಾರಣಗಳಿವೆ" ಎಂದು ತಿಳಿಸಿದರು.

ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ಮಾತನಾಡುತ್ತಾ "ಇತ್ತೀಚಿನ ದಿನಗಳಲ್ಲಿ ಚರ್ಮರೋಗಕ್ಕೆ ಸಂಬಂಧಪಟ್ಟ ವೈದ್ಯಶಾಸ್ತ್ರವು ಮುಂಚೂಣಿಯಲ್ಲಿದೆ. ಏಕೆಂದರೆ ಸೌಂದರ್ಯವರ್ಧಕ ಉಪಕರಣಗಳನ್ನು ಬಳಸಿದಷ್ಟೂ ಚರ್ಮರೋಗ ತಜ್ಞರ ಅಗತ್ಯ ಹೆಚ್ಚಾಗಬಹುದು. ಚರ್ಮರೋಗದ ಪ್ರಯೋಗಶಾಲೆ ಮತ್ತು ಶಸ್ತ್ರಚಿಕಿತ್ಸಾ ಕೊಠಡಿಗಳು ಶ್ರೀದೇವಿ ಆಸ್ಪತ್ರೆಯಲ್ಲಿರುವುದರಿಂದ ಅದರ ಪ್ರಯೋಜನವನ್ನು ವೈದ್ಯರು ಮತ್ತು ರೋಗಿಗಳು ಪಡೆಯಬೇಕು" ಎಂದು ತಿಳಿಸಿದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ಚರ್ಮರೋಗ ವಿಭಾಗದಿಂದ 29.1.2022ರಂದು ಈ ಕಾರ್ಯಕ್ರಮ ಹಮ್ಮಿಕೊಂಡಿತ್ತು

■ ವರದಿ: **ಎನ್.ಆನಂದ**

# ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಸ್ವಿಚ್‌ಗೇರ್ ಪ್ರಯೋಗಾಲಯದ ಉದ್ಘಾಟನೆ

ಸ್ವಿಚ್ ಗೇರ್‌ಗಳು ವಿದ್ಯುತ್ ಸರಬರಾಜಿನಲ್ಲಿ ಬಳಸುವ ಸಾಧನಗಳಾಗಿದ್ದು. ವಿದ್ಯುತ್ ಪೂರೈಕೆಯಲ್ಲಿ ವಿದ್ಯುತ್ ಶಕ್ತಿಯನ್ನು ಕಡಿತಗೊಳಿಸಲು, ಸಂಪರ್ಕಿಸಲು ಮತ್ತು ಭಾರಿ ವಿದ್ಯುತ್ ಉಪಕರಣಗಳನ್ನು ಸಂರಕ್ಷಿಸಲು ಬಳಸಲಾಗುತ್ತದೆ. ಕೈಗಾರಿಕಾ ಯೋಜನೆಗಳಲ್ಲಿ ಸ್ವಿಚ್ ಗೇರ್ ಪ್ರಾಮುಖ್ಯತೆಯೆಂದರೆ ನಿಯಂತ್ರಣ ವ್ಯವಸ್ಥೆ. ಈ ಘಟಕಗಳು ವಿದ್ಯುತ್ ನಡೆಸುವ ಘಟಕಗಳನ್ನು ನಿಯಂತ್ರಿಸಲು ಮತ್ತು ರಕ್ಷಿಸಲು ಸಹಾಯ ಮಾಡುತ್ತವೆ. ಕೆಲವು ಉದಾಹರಣೆಗಳು– ನಿಯಂತ್ರಣ ಫಲಕ ಪ್ರಸ್ತುತ ಟ್ರಾನ್ಸ್ ಫಾರ್ಮರ್‌ಗಳು ಇತ್ಯಾದಿ.

**ಸ್ವಿಚ್ ಗೇರ್‌ನ ಭವಿಷ್ಯ.**

1. ಬೂಸ್ಟ್ ವಿಶ್ವಾಸಾರ್ಹತೆ. ಸ್ವಿಚ್‌ಗೇರ್ ಅಡಚಣೆಯಾಗದೆ ಅಂತರ್‌ಸಂಪರ್ಕವನ್ನು ಖಾತ್ರಿಗೊಳಿಸುತ್ತದೆ. ಉತ್ಪಾದನಾ ಕೇಂದ್ರಗಳ ಸಾಮರ್ಥ್ಯ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ, ಇದು ಅಸಮರ್ಪಕ ಕಾರ್ಯದ ಸಂದರ್ಭದಲ್ಲಿ ಸ್ವಿಚ್‌ಗೇರ್ ಸರ್ಕ್ಯೂಟ್‌ನ ದೋಷಯುಕ್ತ ವಿಭಾಗಗಳನ್ನು ಪ್ರತ್ಯೇಕಿಸುತ್ತದೆ.
2. ಭೌತಿಕ ನಿಯಂತ್ರಣ ಸೌಲಭ್ಯ. ಸ್ವಿಚ್‌ಗೇರ್ ವಿದ್ಯುತ್ ನಿಯಂತ್ರಣ ದೋಷದ ಸಂದರ್ಭದಲ್ಲಿ ಹ್ಯಾಂಡ್‌ಹೆಲ್ಡ್ ಕಾರ್ಯಾಚರಣೆಯನ್ನು ನೀಡುವ ಸೌಲಭ್ಯವನ್ನು ಹೊಂದಿದೆ.
3. ಸಂಪೂರ್ಣ ವ್ಯತ್ಯಾಸ. ಸ್ವಿಚ್‌ಗೇರ್ ಅನ್ನು ಸರ್ಕ್ಯೂಟ್ ಆಧಾರದ ಮೇಲೆ ಕಾರ್ಯನಿರ್ವಹಿಸುವ ಮತ್ತು ಕಾರ್ಯನಿರ್ವಹಿಸದ ಭಾಗಗಳ ನಡುವೆ ಬದಲಾಯಿಸಬಹುದು. ಈ ಸ್ವಿಚ್‌ಗೇರ್ ನಂತರ ಕಾರ್ಯನಿರ್ವಹಿಸದ ಘಟಕವನ್ನು ಪ್ರತ್ಯೇಕಿಸುತ್ತದೆ ಸ್ವಿಚ್‌ಗೇರ್‌ಗಳನ್ನು ವಿದ್ಯುತ್ ಸರಬರಾಜು ಮಾಡುವ ಕಂಪನಿಗಳು, ಉತ್ಪಾದನಾ ಕೇಂದ್ರ ಮತ್ತು ಪ್ರಸರಣ ಕೇಂದ್ರಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ.





ಇವುಗಳಲ್ಲಿ ಪ್ರಮುಖವಾದ ACCL ಆಟೋಮ್ಯಾಟಿಕ್ ಚೇಂಜ್ ಓವರ್ ವಿತ್ ಕರೆಂಟ್ ಲಿಮಿಟರ್, ಆಟೋಮ್ಯಾಟಿಕ್ ಮೇನ್ಸ್ ಫೇಲ್ಯೂರ್, ಬುಚಸ್ ರಿಲೇ, ಅರ್ಥ್ ಲೀಕೇಜ್ ರಿಲೇ ಇನ್ನೂ ಅನೇಕ ವಿದ್ಯುತ್ ಸಂರಕ್ಷಣಾ ಸಾಧನಗಳನ್ನು ಶ್ರೀದೇವಿ ಪಾಲಿಟೆಕ್ನಿಕ್‌ನ ಹೊಸ ಪ್ರಯೋಗಾಲಯದಲ್ಲಿ ಅಳವಡಿಸಲಾಗಿದೆ. ಇದರಿಂದ ತಾಂತ್ರಿಕ ಕೋರ್ಸ್ ಓದುವ ವಿದ್ಯಾರ್ಥಿಗಳಿಗೆ ಬಹಳ ಉಪಯೋಗವಾಗಲಿದೆ. ಅದರಲ್ಲೂ ವಿದ್ಯುತ್ ವಿಭಾಗದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಜ್ಞಾನವನ್ನು ಪಡೆಯಲು ಅನುಕೂಲವಾಗಿದೆ.

ನಮ್ಮ ಶ್ರೀದೇವಿ ಪಾಲಿಟೆಕ್ನಿಕ್‌ನಲ್ಲಿ ಈ ಹೊಸ ಪ್ರಯೋಗಾಲಯದಲ್ಲಿ ಮೇಲೆ ತಿಳಿಸಿರುವ ಉಪಕರಣವನ್ನು ಅಳವಡಿಸಲಾಗಿರುತ್ತದೆ. ಇಂತಹ ಉಪಯುಕ್ತವಾದ ಪ್ರಯೋಗಾಲಯವನ್ನು ದಿನಾಂಕ 16 ಜನವರಿ 2023ರಂದು ಸಂಸ್ಥೆಯ ಸಂಸ್ಥಾಪಕರಾದ ಡಾ. ಎಂ.ಆರ್ ಹುಲಿನಾಯ್ಕರ್ ಉದ್ಘಾಟಿಸಿದರು. ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಶ್ರೀ ಎಂ.ಎಸ್.ಪಾಟೀಲ್ ಅವರು ಶುಭ ಕೋರಿದರು. ಕಾರ್ಯಕ್ರಮದಲ್ಲಿ ಶ್ರೀದೇವಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಾದಂತಹ ಡಾ. ಲೋಕೇಶ್ ಬಿ.ಎಸ್. ಮತ್ತು ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ. ನರೇಂದ್ರ ವಿಶ್ವನಾಥ್, ಎಂಬಿಎ ಮುಖ್ಯಸ್ಥರಾದ ಡಾ. ರಾಮಕೃಷ್ಣ, ಆಡಳಿತ ಅಧಿಕಾರಿಗಳಾದ ಬ್ರಹ್ಮದೇವಯ್ಯ. ಎಲ್ಲಾ ವರ್ಗದ ಅಧ್ಯಾಪಕರು, ಬೋಧಕೇತರ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

■ ವರದಿ: **ಡಾ. ಲೋಕೇಶ್ ಜಿ.ಎಸ್.**

## ಹೊಳೆ ಆಲೂರಿನ ಶ್ರೀ ಕಲ್ಮೇಶ್ವರ ವಿವಿಧೋದ್ದೇಶ ಪ್ರೌಢಶಾಲೆಗೆ ಬೇಕು ಕಾಯಕಲ್ಪ

◀◀ ...ಮೊದಲನೇ ಪುಟದಿಂದ

ಮೈಸೂರು ಭಾಗದಲ್ಲಿ 83 ವರ್ಷಗಳ ಇತಿಹಾಸವಿರುವ ಇಂತಹ ವಿದ್ಯಾಸಂಸ್ಥೆಯಿದ್ದಿದ್ದರೆ ಸರ್ಕಾರ, ಸಾರ್ವಜನಿಕರು, ರಾಜಕಾರಣಿಗಳು, ಶಾಲೆಯ ಊರಿನವರು, ಹಳೆಯ ವಿದ್ಯಾರ್ಥಿಗಳು, ಐ.ಟಿ. ಕಂಪನಿಗಳು 'ವಜ್ರಮಹೋತ್ಸವ'ವನ್ನು ಆಚರಿಸಿ ಆ ಶಾಲೆಯನ್ನು 'ಹೈಟೆಕ್ ಶಾಲೆ'ಯನ್ನಾಗಿ ಪರಿವರ್ತನೆ ಮಾಡುತ್ತಿದ್ದರು.

ಇತ್ತೀಚೆಗೆ ನಾನು ಉಡುಪಿ ತಾಲ್ಲೂಕಿನ ಗ್ರಾಮವೊಂದರ ಶಾಲೆಯ ಆಟದ ಮೈದಾನವನ್ನು ನರೇಗಾ ಯೋಜನೆಯ ಸಹಾಯದಿಂದ ಅತ್ಯಂತ ಸುಂದರವಾಗಿ ನಿರ್ಮಾಣ ಮಾಡಿದ ಸುದ್ದಿಯನ್ನು ನೋಡಿದ್ದೆ.

ಸಚಿವರಾದ ಸಿ.ಸಿ.ಪಾಟೀಲ್ ಅವರು ಈ ಶಾಲೆಯತ್ತ ನೋಡಬೇಕು. ಅವರು ಅಧಿಕಾರಿಗಳೊಡನೆ ಸ್ಥಳ ಪರೀಕ್ಷೆ ಮಾಡಿದರೆ ಸಾಕು. ಇಷ್ಟರಮೇಲೆ ಅವರು ಗದಗದ ಉಸ್ತುವಾರಿ ಸಚಿವರೂ ಹೌದು. ಹೊಳೆ ಆಲೂರಿನ ಶ್ರೀ ಕಲ್ಮೇಶ್ವರ ಪ್ರೌಢಶಾಲೆಯ ಅಮೃತ ಮಹೋತ್ಸವ ಆಚರಿಸಲು ಲೋಕೋಪಯೋಗಿ ಸಚಿವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚನೆಯಾಗಬೇಕು. ಅದಕ್ಕೆ ಸಾಕಷ್ಟು ಸಂಪನ್ಮೂಲವನ್ನು ಸಂಗ್ರಹಿಸಬೇಕು.

ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಆದ್ಯತೆ ಕೊಡುವವರು. ಅವರನ್ನು ಸಂಪರ್ಕ ಮಾಡಿದರೆ ಖಂಡಿತ ಸರ್ಕಾರದಿಂದ ಸಹಾಯವನ್ನು ನೀಡುವುದರಲ್ಲಿ ಯಾವುದೇ ಸಂಶಯವಿಲ್ಲ. ಹೊಳೆ ಆಲೂರು ಗದಗ ಜಿಲ್ಲೆಗೆ ಸೇರುತ್ತದೆ. ಇಲ್ಲಿನ ಡಿಡಿಪಿಐ ಮತ್ತು ಉಪನಿರ್ದೇಶಕರು ಯಾರೂ ಈ ಶಾಲೆಗೆ ಭೇಟಿ ಕೊಟ್ಟಿರುವ ಸಾಧ್ಯತೆ ಕಡಿಮೆ. ಪ್ರತಿವರ್ಷ ಮೂಲಭೂತ ಸೌಕರ್ಯಕ್ಕೆ ಸ್ವಲ್ಪ ಹಣವನ್ನು ಕೊಟ್ಟಿದ್ದರೂ ಶಾಲೆ ಈ ಸ್ಥಿತಿಯಲ್ಲಿರುತ್ತಿರಲಿಲ್ಲ. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಸಚಿವರಾದ ಬಿ.ಸಿ.ನಾಗೇಶ್ ಅವರು ಈ ವಿಚಾರದಲ್ಲಿ ಗಮನ ಹರಿಸುವ ಅಗತ್ಯವಿದೆ. ಬಾಲಗಂಗಾಧರ ತಿಲಕ್ ಅವರ ಅನುಯಾಯಿ ಆಲೂರು ವೆಂಕಟರಾಯರ ಜನ್ಮಸ್ಥಳವಾಗಿರುವ ಹೊಳೆ ಆಲೂರಿನ ಪ್ರೌಢಶಾಲೆಯು ಪ್ರಾಣಿಗಳೂ ವಾಸ ಮಾಡಲಾಗದ ಸ್ಥಿತಿಯಲ್ಲಿದ್ದರೆ ಆ ಮಹಾಚೇತನಕ್ಕೆ ನಾವು ಅಗೌರವ ತೋರಿಸಿದಂತಾಗುತ್ತದೆಯಲ್ಲವೇ?

ಹೊಳೆ ಆಲೂರಿನ ಪ್ರೌಢಶಾಲೆಯ ಪುನರುಜ್ಜೀವನ ಕಾರ್ಯವನ್ನು ಶಿಕ್ಷಣ ಇಲಾಖೆಯ ಕಾರ್ಯಕ್ರಮವಾಗಿ ಕೈಗೆತ್ತಿಕೊಳ್ಳಬೇಕು. ಕೊನೆಯದಾಗಿ, ಹೊಳೆ ಆಲೂರಿನ ಸಾರ್ವಜನಿಕರು ತಮ್ಮ ಶಾಲೆಯ ಕಡೆ ಗಮನ ಹರಿಸಬೇಕು. ಹೊಳೆ ಆಲೂರಿಗೆ ಇಡೀ ರಾಜ್ಯದಲ್ಲಿ ಉತ್ತಮ ಹೆಸರಿದೆ. ಅಂದಮೇಲೆ ಊರಿನ ಶಾಲೆಯನ್ನು ಸರಿಪಡಿಸುವುದು ಈ ಊರಿನ ಪ್ರತಿಯೊಬ್ಬರ ಕರ್ತವ್ಯವಾಗಿದೆ.

# ಕೋವಿಡ್ -19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಆಣ್ವಿಕ ಪ್ರಯೋಗಾಲಯದ (MOLECULAR LABORATORY) ಮಹತ್ವ

■ ಡಾ. ಸೌಮ್ಯ .ಕೆ.
ಪ್ರಾಧ್ಯಾಪಕರು
ಮೈಕ್ರೋಬಯಾಲಜಿ ವಿಭಾಗ,
ಸಿಮ್ಸ್ ಅಂಡ್ ಆರ್‌ಹೆಚ್



2019ರ ಡಿಸೆಂಬರ್‌ನಲ್ಲಿ ಕಾಣಿಸಿಕೊಂಡ ಕೋವಿಡ್– 19 ಎಂಬ ಮಹಾಮಾರಿ ಜಗತ್ತನ್ನೇ ತಲ್ಲಣಗೊಳಿಸಿತ್ತು. ಸಾಮಾನ್ಯ ಜನರು ಎಂದಿಗೂ ಕೇಳರಿಯದ ಈ ಸಾಂಕ್ರಾಮಿಕ ರೋಗವು ಭಯಾನಕ ವಾತಾವರಣವನ್ನು ಸೃಷ್ಟಿಸಿತ್ತು.

ಕೋವಿಡ್– 19 ಪ್ರಕರಣಗಳ ಸಂಖ್ಯೆಯು ಹೆಚ್ಚಳವಾಗುತ್ತಿದ್ದಂತೆ ಸರ್ಕಾರವು ಕೋವಿಡ್ ಆಸ್ಪತ್ರೆಗಳು, ಕೋವಿಡ್ ಐಸಿಯುಗಳು ಹಾಗೂ ಕೋವಿಡ್ ಕೇರ್ ಸೆಂಟರ್‌ಗಳನ್ನು ಸ್ಥಾಪಿಸಲು ಸಜ್ಜಾಯಿತು. ರೋಗನಿರ್ಣಯ ಹಾಗೂ ಅದರ ನಿಖರತೆ ತಿಳಿಯಲು ತಕ್ಷಣವೇ ಡಯಾಗ್ನೋಸ್ಟಿಕ್ ಸೌಲಭ್ಯಗಳನ್ನು ಒದಗಿಸುವ ಬೇಡಿಕೆಯೂ ಹೆಚ್ಚಾಯಿತು. ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದಂತೆ ಖಾಸಗಿ ವೈದ್ಯಕೀಯ ಕಾಲೇಜುಗಳು ಮತ್ತು ಪ್ರಯೋಗಾಲಯಗಳು ಕೋವಿಡ್– 19 ಸಾಂಕ್ರಾಮಿಕದ ಸಕಾಲಿಕ ರೋಗ ನಿರ್ಣಯಕ್ಕಾಗಿ ಸರ್ಕಾರಿ ಸಂಸ್ಥೆಗಳೊಂದಿಗೆ ಕೈಜೋಡಿಸಿದವು. ಕೋವಿಡ್– 19 ಆರಂಭದ ದಿನಗಳಲ್ಲಿ, ಈ ರೋಗವು ಯಾವ ತಿರುವುಗಳನ್ನು ತೆಗೆದುಕೊಳ್ಳಬಹುದು ಎಂಬುದು ವೈದ್ಯಕೀಯ ಜಗತ್ತಿಗೂ ಸ್ಪಷ್ಟವಾಗಿರಲಿಲ್ಲ.

SIMS & RH ಆಡಳಿತ ಮಂಡಳಿಯು ಸೂಕ್ಷ್ಮ ಜೀವವಿಜ್ಞಾನ ವಿಭಾಗ (ಮೈಕ್ರೋಬಯಾಲಜಿ) ಮತ್ತು ಆಣ್ವಿಕ ಜೀವಶಾಸ್ತ್ರ ಪ್ರಯೋಗಾಲಯವನ್ನು (ಮಾಲಿಕ್ಯುಲರ್ ಬಯಾಲಜಿ ಲ್ಯಾಬೊರೇಟರಿ) ಸ್ಥಾಪಿಸುವ ಪ್ರಕ್ರಿಯೆ ಪ್ರಾರಂಭಿಸಲು ನಿರ್ದೇಶಿಸಿತು. ಆದರೆ, ಇದೊಂದು ಅತ್ಯಂತ ಕಠಿಣವಾದ ಕಾರ್ಯವಾಗಿತ್ತು. ಅತ್ಯಂತ ಕಡಿಮೆ ಅವಧಿಯಲ್ಲಿ ವಿಭಾಗವು ತನ್ನನ್ನು ಇದಕ್ಕೆ ಹೊಂದಿಸಿಕೊಂಡು, ಮುಂದೆ ಬರುವ ಸವಾಲುಗಳನ್ನು ಮೆಟ್ಟಿ ನಿಲ್ಲಬೇಕಿತ್ತು. ಅದುವರೆಗೆ ಆಣ್ವಿಕ ಜೀವಶಾಸ್ತ್ರದ ಸೌಲಭ್ಯಗಳು ಕೇವಲ ಕೆಲವೇ ಸಂಶೋಧನಾ ಕೇಂದ್ರಗಳಲ್ಲಿದ್ದವು ಹಾಗೂ ಆಣ್ವಿಕ ಜೀವಶಾಸ್ತ್ರದ ಅನುಭವ ಹೊಂದಿರುವ ಉಲ್ಲೇಖಿತ ಪ್ರಯೋಗಾಲಯಗಳು ಮತ್ತು ತಾಂತ್ರಿಕ ಸಿಬ್ಬಂದಿ ಸಹ ಬಹಳ ಕಡಿಮೆ ಸಂಖ್ಯೆಯಲ್ಲಿದ್ದರು.

ಶ್ರೀದೇವಿ ವೈದ್ಯಕೀಯ ಕಾಲೇಜಿನ ಮೈಕ್ರೋಬಯಾಲಜಿ ವಿಭಾಗದಲ್ಲಿನ ಸಿಬ್ಬಂದಿ ಮತ್ತು ತಂತ್ರಜ್ಞರು ಅತ್ಯುತ್ತಮ ತರಬೇತಿ ಪಡೆದು, ಲ್ಯಾಬ್ ಸ್ಥಾಪನೆಯ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡರು. ಅತ್ಯಾಧುನಿಕ ಉಪಕರಣಗಳನ್ನು ಖರೀದಿಸಲಾಯಿತು ಹಾಗೂ ಅಗತ್ಯ ಮೂಲಸೌಕರ್ಯಗಳ ವ್ಯವಸ್ಥೆಯನ್ನೂ ಮಾಡಿಕೊಳ್ಳಲಾಯಿತು. ಪ್ರಯೋಗಾಲಯದ ಗುಣಮಟ್ಟ ಹಾಗೂ ತಾಂತ್ರಿಕ ಸಾಮರ್ಥ್ಯವನ್ನು ನಿರ್ಣಯಿಸುವ ಪರೀಕ್ಷೆ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳ (ಎನ್‌ಎಬಿಎಲ್) 'ರಾಷ್ಟ್ರೀಯ ಮಾನ್ಯತೆ ಮಂಡಳಿ'ಯಿಂದ ಮಾನ್ಯತೆ ಪಡೆಯುವ ಪ್ರಕ್ರಿಯೆಯು ಮುಂದಿನ ಹಂತವಾಗಿತ್ತು. ಎಲ್ಲಾ ಅಗತ್ಯ ದಾಖಲೆಗಳು ಮತ್ತು ಕಾರ್ಯವಿಧಾನಗಳನ್ನು ಪ್ರಾರಂಭಿಸಿ, ಶೀಘ್ರದಲ್ಲೇ ಪ್ರಯೋಗಾಲಯವು ಎನ್‌ಎಬಿಎಲ್‌ನಿಂದ ಮಾನ್ಯತೆ ಪಡೆಯಿತು. ಇದರೊಂದಿಗೆ SIMS & RH ನಲ್ಲಿರುವ ಮಾಲಿಕ್ಯುಲರ್ ಬಯಾಲಜಿ ಪ್ರಯೋಗಾಲಯವು ಸಾಂಪ್ರದಾಯಿಕ ಆರ್‌ಟಿಪಿಸಿಆರ್ ಪರೀಕ್ಷಾ ಪ್ರಕ್ರಿಯೆಗಾಗಿ ಎನ್‌ಎಬಿಎಲ್‌ನಿಂದ ಮಾನ್ಯತೆ ಪಡೆದ ತುಮಕೂರಿನ ಮೊದಲ ಖಾಸಗಿ ಪ್ರಯೋಗಾಲಯ ಎನಿಸಿಕೊಂಡಿತು.






ಎನ್‌ಎಬಿಎಲ್ ಮೌಲ್ಯಮಾಪನವು ನಿರಂತರವಾಗಿ ನಡೆಯುತ್ತಿರುವ ಪ್ರಕ್ರಿಯೆಯಾಗಿದೆ. ವಾರ್ಷಿಕ ತಪಾಸಣೆಯೊಂದಿಗೆ ಮತ್ತು ಅತ್ಯುತ್ತಮವಾದ ಗುಣಮಟ್ಟವನ್ನು ನಿರ್ವಹಿಸುವ ಪ್ರಯೋಗಾಲಯಗಳಿಗೆ ಮಾತ್ರ ಈ ಸಂಸ್ಥೆ ಮಾನ್ಯತೆ ನೀಡುತ್ತದೆ. ಆದ್ದರಿಂದ, ನೋಡಲ್ ಸೆಂಟರ್ ನಿಮ್ಹಾನ್ಸ್‌ನ ನಿರ್ವಹಣೆ ಮತ್ತು ಮಾರ್ಗದರ್ಶನ ಹಾಗೂ ಅಪಾರ ಬೆಂಬಲದೊಂದಿಗೆ, ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಮತ್ತು ರಿಸರ್ಚ್ ಆಸ್ಪತ್ರೆಯಲ್ಲಿ ಡಯಾಗ್ನೋಸ್ಟಿಕ್ ಮಾಲಿಕ್ಯುಲರ್ ಲ್ಯಾಬೊರೇಟರಿಯನ್ನು 2020ರ ಸೆಪ್ಟೆಂಬರ್‌ನಲ್ಲಿ ಉದ್ಘಾಟಿಸಲಾಯಿತು. ಅಂದಿನಿಂದ ಪ್ರಯೋಗಾಲಯವು 40,000ಕ್ಕೂ ಹೆಚ್ಚು ಮಾದರಿಗಳನ್ನು ಪರೀಕ್ಷಿಸಿದೆ.



ಆಂತರಿಕ ಮಾದರಿ ಸಂಗ್ರಹಣೆಗೆ ಹೆಚ್ಚುವರಿಯಾಗಿ ಮನೆಗಳಲ್ಲಿ ಮಾದರಿ ಸಂಗ್ರಹಣೆಯ ಸೌಲಭ್ಯಗಳನ್ನು ಮತ್ತು ವಿವಿಧ ಆಸ್ಪತ್ರೆಗಳು ಹಾಗೂ ಪ್ರಯೋಗಾಲಯಗಳ ಉಲ್ಲೇಖಿತ ಪರೀಕ್ಷಾ ಸೇವೆಗಳನ್ನು ಕೂಡಾ ಈ ಪ್ರಯೋಗಾಲಯ ಒದಗಿಸುತ್ತದೆ. ನಮ್ಮ ಸಿಬ್ಬಂದಿ ದಿನದ ಇಪ್ಪತ್ನಾಲ್ಕು ಗಂಟೆಯೂ ಕೆಲಸ ಮಾಡುತ್ತಿದ್ದು, ಸೋಂಕಿನ ಅಪಾಯದ ನಡುವೆಯೂ ಮಾದರಿಗಳನ್ನು ನಿರ್ವಹಿಸಿದ್ದಾರೆ. ಕೋವಿಡ್ ಸಾಂಕ್ರಾಮಿಕ ರೋಗ ಉತ್ತುಂಗದಲ್ಲಿದ್ದಾಗಲೇ ಪ್ರತಿ ದಿನ 1000ಕ್ಕೂ ಹೆಚ್ಚು ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿದ್ದಾರೆ. ನಮ್ಮ ಸೇವಾ ಸಿಬ್ಬಂದಿಯು ಟನ್‌ಗಟ್ಟಲೇ ಇದ್ದ ಕಾಗದದ ಕೆಲಸವನ್ನು ಬಹುತೇಕ ಯಾವುದೇ ತಪ್ಪಿಲ್ಲದೇ ಪೂರ್ಣಗೊಳಿಸಿದ್ದಾರೆ. ಮಾದರಿಗಳ ಸಂಗ್ರಹಣೆ, ಸಂಸ್ಕರಣೆ ಮತ್ತು ಆರ್‌ಟಿಪಿಸಿಆರ್ ಪರೀಕ್ಷೆಯೊಂದಿಗೆ ವ್ಯವಹರಿಸುವ ತಾಂತ್ರಿಕ ಸಿಬ್ಬಂದಿಯ ಬಗ್ಗೆ ಇಲ್ಲಿ ವಿಶೇಷವಾಗಿ ಉಲ್ಲೇಖಿಸಲೇಬೇಕಿದೆ. ಅವರು ದೀರ್ಘಾವಧಿಯಲ್ಲಿ ನಿರಂತರವಾಗಿ ಕೆಲಸ ಮಾಡಿದ್ದಾರೆ. ಅನೇಕ ವಿಷಯಗಳಲ್ಲಿ ಕೋವಿಡ್ ಸಾಂಕ್ರಾಮಿಕ ನಿರ್ವಹಿಸಿದ ಆ ಹೀರೊಗಳು ಸದಾ ಗೌರವಾನ್ವಿತರು.

ಪ್ರತಿ ಸಮಸ್ಯೆಗೂ ಒಂದು ಪರಿಹಾರದ ಆಶಾಕಿರಣ ಇರುತ್ತದೆ. ಕೋವಿಡ್ ಸಾಂಕ್ರಾಮಿಕ ರೋಗವು ಪ್ರತಿ ಕುಟುಂಬವನ್ನೂ ಒಂದಲ್ಲಾ ಒಂದು ರೀತಿಯಲ್ಲಿ ಕಾಡಿ ವಿನಾಶಕ್ಕೆ ತಳ್ಳಿದೆ. ಆದರೆ, ಇದೇ ಸಮಯದಲ್ಲಿ ಆಣ್ವಿಕ ಜೀವಶಾಸ್ತ್ರದ ಕ್ಷೇತ್ರದಲ್ಲಿ ಅಪಾರ ಬೆಳವಣಿಗೆಗೂ ಕಾರಣವಾಗಿದೆ. SARS CoV-2 ಅನ್ನು ಪತ್ತೆ ಹಚ್ಚುವುದರ ಜೊತೆಗೆ, ವಿವಿಧ ಬ್ಯಾಕ್ಟೀರಿಯಾಗಳು, ಸೋಂಕು, ಪ್ಯಾರಾಸಿಟಿಕ್, ಫಂಗಲ್ ಮತ್ತು ಸ್ವಯಂ ನಿರೋಧಕ ಕಾಯಿಲೆಗಳಿಗೆ ಆರ್‌ಟಿಪಿಸಿಆರ್ ಪರೀಕ್ಷೆಗಳನ್ನು ನಡೆಸಲು ಮಾಲಿಕ್ಯುಲರ್ ಪ್ರಯೋಗಾಲಯವು ಎಲ್ಲಾ ರೀತಿಯಿಂದ ಸಜ್ಜಾಗಿದೆ. ಮುಂದಿನ ದಿನಗಳಲ್ಲಿ ಇಷ್ಟೆಲ್ಲಾ ಸವಲತ್ತುಗಳನ್ನು ತುಮಕೂರಿನ ಜನರಿಗೆ ಒದಗಿಸುವ ಉದ್ದೇಶವನ್ನು ಆಡಳಿತ ಮಂಡಳಿ ಹೊಂದಿದೆ. ಯಾವುದೇ ಸಮಯದಲ್ಲೂ ಮುನ್ಸೂಚನೆ ಕೊಡದೇ ಸಾಂಕ್ರಾಮಿಕ ರೋಗಗಳು ಎದುರಾಗಬಹುದು ಎಂಬುದನ್ನು ಕೋವಿಡ್‌ನೊಂದಿಗಿನ ನಮ್ಮ ಅನುಭವ ನಮಗೆ ಕಲಿಸಿದೆ. ಇಂತಹ ಸಾಂಕ್ರಾಮಿಕ ರೋಗಗಳನ್ನು ಪತ್ತೆ ಹಚ್ಚಲು SIMS & RHನಲ್ಲಿರುವ ಡಯಾಗ್ನೋಸ್ಟಿಕ್ ಮಾಲಿಕ್ಯುಲರ್ ಲ್ಯಾಬೊರೇಟರಿಯು ಸಹಾಯ ಮಾಡಲು ಸುಸಜ್ಜಿತವಾಗಿದೆ.

■ ಕನ್ನಡಕ್ಕೆ: ಬಿ.ಎಂ. ಸುನೀತಾ

---

# ಪದವಿ ಶಿಕ್ಷಣದ ಗುಣಮಟ್ಟ ಹೆಚ್ಚಳಕ್ಕೆ ಸಹಾಯಕವಾಗಿರುವ ಸಂಶೋಧನೆ

ಶ್ರೀದೇವಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ. ಗ್ರೇಸಿ ಹೇಮಲತಾ ಅವರಿಗೆ ``A Study on Competency Assessment among the faculty of Arts and Science Colleges in Tumakuru District of Karnataka State" ವಿಷಯಕ್ಕೆ ಭಾರತಿಯಾರ್ ವಿಶ್ವವಿದ್ಯಾನಿಲಯ ಪಿಹೆಚ್.ಡಿ. ಪದವಿಯನ್ನು ನೀಡಿದೆ. ಇವರ ಮಾರ್ಗದರ್ಶಕರು ಡಾ. ಆರ್.ಗಣೇಶನ್.

ಡಾ. ಗ್ರೇಸಿ ಹೇಮಲತಾ ಅವರು ಮಂಡ್ಯದ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜಿನಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಪದವಿ ಪಡೆದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ಸ್ನಾತಕೋತ್ತರವಾಗಿ 'ಮಾನವ ಸಂಪನ್ಮೂಲ' ವಿಷಯದಲ್ಲಿ ಎಂ.ಬಿ.ಎ. ಪದವಿ ಪಡೆದಿದ್ದಾರೆ.



ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಪದವಿಯನ್ನು ಮೈಸೂರಿನ ಮುಕ್ತ ವಿಶ್ವವಿದ್ಯಾನಿಲಯದಿಂದ ಗಳಿಸಿದ್ದಾರೆ. ಭಾರತಿಯಾರ್ ವಿಶ್ವವಿದ್ಯಾನಿಲಯದಲ್ಲಿ ಎಂ.ಫಿಲ್. ಸಹ ಮುಗಿಸಿದ್ದಾರೆ.


ಡಾ. ಹೇಮಲತಾ ಅವರು ತುಮಕೂರು ಜಿಲ್ಲೆಯ ವಿಜ್ಞಾನ ಮತ್ತು ಕಲಾ ಕಾಲೇಜುಗಳಲ್ಲಿರುವ ಮೂಲಭೂತ ಸೌಲಭ್ಯ, ಅಧ್ಯಾಪಕರ ಗುಣಮಟ್ಟ, ಕಲಿಕಾ ವಿಧಾನ, ವಿದ್ಯಾಭ್ಯಾಸದ ಅವಧಿಯಲ್ಲಿ ಮಕ್ಕಳು ಪಡೆಯುವ ಕೌಶಲ, ಅದರಿಂದ ಅವರುಗಳು ಕೆಲಸ ಪಡೆಯಲು ಸಾಧ್ಯವಿದೆಯೇ ಮೊದಲಾದ ವಿಚಾರಗಳನ್ನು ತಮ್ಮ ಪಿಹೆಚ್.ಡಿ. ಪ್ರಬಂಧದಲ್ಲಿ ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ಪದವಿ ವಿದ್ಯಾರ್ಥಿಗಳು ಶಿಕ್ಷಣದ ನಂತರ ಉದ್ಯೋಗ ಪಡೆಯಲು ಶಿಕ್ಷಣದ ಅವಧಿಯಲ್ಲಿ ಗಳಿಸಿಕೊಳ್ಳಬೇಕಾಗಿರುವ ಕೌಶಲದ ಕುರಿತು ಇಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಈ ಸಂಶೋಧಕರು ಕಂಡುಕೊಂಡಿರುವ ಸಂಶೋಧನಾ ಸತ್ಯಗಳು ಪದವಿ ಶಿಕ್ಷಣದ ಸುಧಾರಣೆಗೆ ಸಹಾಯಕವಾಗುತ್ತವೆ.

ಡಾ. ಹೇಮಲತಾ ಅವರ ತಂದೆ ಪುಟ್ಟರಾಜು. ತಾಯಿ ಶ್ರೀಮತಿ ಸಲೋಮಿ ಪುಟ್ಟರಾಜು. ಇವರ ಪತಿ ಶ್ರೀ ಪ್ರಭು ಅವರು ಖಾಸಗಿ ಕಂಪನಿಯ ಉದ್ಯೋಗಿ. ಈ ದಂಪತಿಗೆ ಇಬ್ಬರು ಮಕ್ಕಳು.

ಪಿಹೆಚ್.ಡಿ. ಪ್ರಬಂಧ ಮಾಡಲು ತಮಗೆ ಪ್ರೋತ್ಸಾಹ ನೀಡಿದ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಮತ್ತು ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ. ನರೇಂದ್ರ ವಿಶ್ವನಾಥ ಅವರಿಗೆ ಡಾ. ಗ್ರೇಸಿ ಹೇಮಲತಾ ಅವರು ಕೃತಜ್ಞತೆ ಅರ್ಪಿಸಿದ್ದಾರೆ.

# ಶ್ರೀದೇವಿ ಶಿಕ್ಷಣ ಸಂಸ್ಥೆಯ ಅವರಣಕ್ಕೆ
# ಶ್ರೀ ದುರ್ಗಾಂಬಿಕಾ ದೇವಿಯ ಆಗಮನ- ಒಂದು ನೆನಪು

ನೆನಪು



■ ಡಾ. ಲಾವಣ್ಯ ರಮಣ ಹುಲಿನಾಯ್ಕರ್
ನೇತ್ರ ತಜ್ಞರು
lavanya.pillappa@gmail.com

ಫ್ರಾನ್ಸ್‌ನ ಪ್ರಸಿದ್ಧ ಚಿಂತಕ ವಾಲ್ಟೇರ್ ದೇವರನ್ನು ಕುರಿತು ಹೇಳುವ ಮಾತು ವಿಶ್ವದ ಎಲ್ಲೆಡೆ ಪ್ರಸಿದ್ಧವಾಗಿದೆ. ಆ ಮಾತೆಂದರೆ 'ದೇವರು ಇಲ್ಲದೇ ಹೋದರೆ ನಾವು ಅವನನ್ನು ಸೃಷ್ಟಿಸಿಕೊಳ್ಳಬೇಕು'. ವಾಲ್ಟೇರ್ ಪ್ರಕಾರ, ಮನುಷ್ಯನಿಗೆ ಎಷ್ಟೇ ಐಹಿಕ ಸಂಪತ್ತಿದ್ದರೂ ಮಾನಸಿಕ ಸಂತೃಪ್ತಿ ದೊರೆಯುತ್ತದೆ ಎಂದು ಭಾವಿಸುವ ಹಾಗಿಲ್ಲ. ಜೀವನದಲ್ಲಿ ಎಲ್ಲಾ ವಸ್ತುಗಳು ದೊರಕಿದ್ದರೂ ಮಾನಸಿಕ ನೆಮ್ಮದಿಯಿಲ್ಲದಿದ್ದರೆ ಆ ವ್ಯಕ್ತಿ ಸದಾ ತಳಮಳಕ್ಕೊಳಗಾಗುತ್ತಿರುತ್ತಾನೆ. ಆವನಿಗೆ ಯಾವುದರಲ್ಲೂ ಆಸಕ್ತಿಯಿರುವುದಿಲ್ಲ. ಅವನು ಚಲನಶೀಲತೆ ಕಳೆದುಕೊಂಡು ನಿಂತ ನೀರಾಗಿ ಬಿಡುತ್ತಾನೆ. ಅವನಿಗೆ ಮಾನಸಿಕ ನೆಮ್ಮದಿ ದೊರಕಿದರೆ ಅದ್ಭುತ ಸಾಧನೆ ಮಾಡುತ್ತಾನೆ.

ಹಾಗಾದರೆ ಮಾನಸಿಕ ನೆಮ್ಮದಿ ಪಡೆಯಲು ಏನು ಮಾಡಬೇಕು? ವ್ಯಕ್ತಿಯಲ್ಲಿ ಸದಾ ಅಹಂ ಹಾವಿನ ಹೆಡೆಯಂತೆ ಆಡುತ್ತಿರುತ್ತದೆ. ಅದು ತುಳಿದಷ್ಟೂ ಚೆಂಡಿನಂತೆ ಮೇಲಕ್ಕೆ ಪುಟಿದೇಳುತ್ತದೆ. ಆಗ ವ್ಯಕ್ತಿ ದೊಡ್ಡಶಕ್ತಿಗೆ ಶರಣಾದರೆ ಅವನಲ್ಲಿ ಸಹಜವಾಗಿ ಬದಲಾವಣೆಯಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಕತೆ, ಕಾವ್ಯ ಹಾಗೂ ಪುರಾಣಗಳಲ್ಲಿ ಶರಣಾಗುವಿಕೆಯ ವಿಚಾರ ಪ್ರಸ್ತಾಪವಾಗಿದೆ. ಶ್ರೀ ರಾಮಾಯಣ ಮಹಾಕಾವ್ಯದಲ್ಲಿ ಬರುವ ಶ್ರೀ ಹನುಮಂತನ ಪ್ರಸಂಗವನ್ನು ತೆಗೆದುಕೊಳ್ಳಿ. ಹನುಮಂತ ಎಲ್ಲದರಲ್ಲೂ ಸಮರ್ಥ, ಪರಾಕ್ರಮಿ. ಸಕಲ ಶಾಸ್ತ್ರ ಬಲ್ಲ ಪಾರಂಗತ. ಅವನಿಗೆ ತನ್ನ ಶಕ್ತಿಯ ಮೇಲೆ ವಿಶ್ವಾಸವಿರಲಿಲ್ಲ. ಹನುಮಂತನು ಶ್ರೀರಾಮನಿಗೆ ಶರಣಾದ. ಶ್ರೀರಾಮ ಹನುಮಂತನಲ್ಲಿ ಆತ್ಮವಿಶ್ವಾಸ ವೃದ್ಧಿಸಿದ.

ಅದೇ ಇಂದಿನ ಯುವಜನಾಂಗ ಅನೇಕ ಸವಾಲುಗಳ ನಡುವೆ ಬದುಕಬೇಕಾಗಿದೆ. ಕೇವಲ ಪದವಿಯಿದ್ದರೆ ಜೀವನದಲ್ಲಿ ಯಶಸ್ವಿಯಾಗುತ್ತೇವೆ ಎಂದು ಯಾರೂ ಭಾವಿಸುವ ಹಾಗಿಲ್ಲ. ಏಕಾಗ್ರತೆ ಮತ್ತು ಕೌಶಲ್ಯಗಳು ಇಂದು ಯುವಜನಾಂಗಕ್ಕೆ ಬೇಕಾದ ಗುಣಗಳಾಗಿವೆ. ನಿಮ್ಮಲ್ಲಿ ದೈವಶ್ರದ್ಧೆಯಿದ್ದರೆ ಆ ಗುಣಗಳು ಬೆಳೆಯಲು ಸಹಾಯಕವಾಗುತ್ತದೆ.





ಈ ಕಾರಣಕ್ಕಾಗಿ ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಶ್ರೀ ದುರ್ಗಾಂಬಿಕಾ ದೇವಿಯ ಆಲಯವನ್ನು ನಿರ್ಮಾಣ ಮಾಡಲು ಶ್ರೀಮತಿ ಶಾಂತಾ ದುರ್ಗಾದೇವಿ ಹುಲಿನಾಯ್ಕರ್ ಮತ್ತು ಡಾ. ಎಂ.ಆರ್. ಹುಲಿನಾಯ್ಕರ್ ಅವರುಗಳು ತೀರ್ಮಾನ ಮಾಡಿರಬಹುದು.

ಶ್ರೀ ದುರ್ಗಾಂಬಿಕಾ ದೇವಿಯ ಮೂರ್ತಿ ನಿರ್ಮಾಣದ ಜವಾಬ್ದಾರಿಯನ್ನು ಖ್ಯಾತ ಶಿಲ್ಪಿ ಸುರಾಲ ವೆಂಕಟರಮಣಭಟ್ಟರು ಮತ್ತು ಶ್ರೀಮತಿ ರತ್ನ ವೆಂಕಟರಮಣಭಟ್ಟರು ವಹಿಸಿಕೊಂಡಿದ್ದರು. ದೇವಿ ಮೂರ್ತಿಯ ಸಿದ್ಧತೆಯ ಸಮಯದಲ್ಲಿ ಹಲವು ಸಲ ಶಿಲ್ಪಿ ವೆಂಕಟರಮಣಭಟ್ಟರ ಮನೆಗೆ ಹೋಗಿದ್ದೆವು. ಶ್ರೀದೇವಿ ಮೂರ್ತಿಯ ಕೆತ್ತನೆಯ ಮೊದಲಿಗೆ ಸಂಬಂಧಪಟ್ಟ ಶಿಲೆಗೆ ಶಾಸ್ತ್ರೋಕ್ತವಾಗಿ ಪೂಜೆ ಮಾಡಿದ್ದೆವು.

ಅಂತಿಮವಾಗಿ ಶ್ರೀ ದುರ್ಗಾಂಬಿಕಾ ದೇವಿ ಬೆಂಗಳೂರಿನಿಂದ ತುಮಕೂರಿಗೆ ದಿ. 17.1.2020 ರಂದು ಬರಲು ನಿರ್ಧರಿಸಿದಳು. ಶಿಲ್ಪಿ ವೆಂಕಟರಮಣಭಟ್ಟರು ಆ ದಿನವನ್ನು ನಿಗದಿ ಮಾಡಿದರು. ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಇತಿಹಾಸದಲ್ಲಿ ಅದೊಂದು ಸುವರ್ಣಕಾಲವೆಂದರೆ ತಪ್ಪಿಲ್ಲ. ಅಮ್ಮ ಶ್ರೀಮತಿ ಶಾಂತಾ ದುರ್ಗಾದೇವಿ ಮತ್ತು ಅಪ್ಪಾಜಿ ಡಾ. ಹುಲಿನಾಯ್ಕರ್ ಅವರ ಬಹುದಿನದ ಕನಸು ಸಾಕಾರಗೊಂಡಿತ್ತು.

ಅಂದು ಶಿರಾ ಗೇಟ್‌ನಲ್ಲಿ ಶ್ರೀದೇವಿಯನ್ನು ಬರಮಾಡಿಕೊಳ್ಳಲು ತುಮಕೂರಿನ ಶ್ರೀ ರಾಮಕೃಷ್ಣ ಮತ್ತು ಶ್ರೀ ವಿವೇಕಾನಂದ ಆಶ್ರಮದ ಅಧ್ಯಕ್ಷರಾಗಿರುವ ಪೂಜ್ಯಶ್ರೀ ವೀರೇಶಾನಂದ ಸ್ವಾಮೀಜಿ ಮತ್ತು ತುಮಕೂರಿನ ಶಾಸಕರಾಗಿರುವ ಜ್ಯೋತಿ ಗಣೇಶ್ ಅವರು ಹಾಜರಿದ್ದರು. ಶಿರಾ ಗೇಟ್‌ನಿಂದ ಶ್ರೀದೇವಿ ವಿದ್ಯಾಸಂಸ್ಥೆಯ ತನಕ ಎರಡು ಕಿ.ಮೀ. ದೂರ ದೇವಿಯ ಮೆರವಣಿಗೆಯನ್ನು ಆಯೋಜಿಸಲಾಗಿತ್ತು. ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ವೀರಗಾಸೆ ಹಾಗೂ ಇತರ ಜಾನಪದ ನೃತ್ಯಗಳಿದ್ದವು. ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಯೇ ಸಂತೋಷದಿಂದ ನೃತ್ಯ ಮಾಡುತ್ತಿದ್ದ ದೃಶ್ಯ ಮರೆಯಲಾಗದಂಥದ್ದು. ನೂರ ಎಂಟು ಕಲಶಗಳನ್ನು ಹೊತ್ತ ಮಹಿಳೆಯರಿಂದಾಗಿ ಮೆರವಣಿಗೆ ಆಕರ್ಷಕವಾಗಿತ್ತು. ಮೆರವಣಿಗೆಯಲ್ಲಿ ಶ್ರೀದೇವಿ ಸಂಸ್ಥೆಯ ವಿದ್ಯಾರ್ಥಿಗಳು, ಬೋಧಕರು ಮತ್ತು ಬೋಧಕೇತರ ಸಿಬ್ಬಂದಿ ಭಾಗವಹಿಸಿದ್ದರು. ಮೆರವಣಿಗೆ ಸರ್ವ ರೀತಿಯಲ್ಲೂ ಯಶಸ್ವಿಯಾಗಲು ಶ್ರೀದೇವಿ ಸಂಸ್ಥೆಯ ನೌಕರರ ಕೊಡುಗೆ ಸಾಕಷ್ಟಿದೆ. ದೇವಿಯ ಆಗಮನದ ಸಂದರ್ಭದಲ್ಲಿ ಅದರಲ್ಲಿ ಭಾಗವಹಿಸಲು ಬೇರೆ ಊರುಗಳಿಂದ ಬಂಧುಗಳು ಮತ್ತು ಮಿತ್ರರು ಆಗಮಿಸಿದ್ದರು. ಸಾಕಷ್ಟು ಸಂಖ್ಯೆಯಲ್ಲಿ ಭಕ್ತರು ನೆರೆದಿದ್ದರು. ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಿದ್ದರು.

ಶ್ರೀ ದುರ್ಗಾಂಬಿಕಾ ದೇವಿಗಾಗಿ ಕಳೆದ ಐದು ವರ್ಷಗಳಿಂದ ಭಕ್ತರು ಜಾತಕಪಕ್ಷಿಯಂತೆ ಕಾಯುತ್ತಿದ್ದರು. ಶ್ರೀ ದುರ್ಗಾಂಬಿಕಾ ದೇವಿಯ ಸ್ಥಾಪನೆಯ ಕಾರಣಕ್ಕಾಗಿ ಈ ಸ್ಥಳದಲ್ಲಿ ಪ್ರತಿನಿತ್ಯ ಶ್ರೀ ಲಲಿತಾಸಹಸ್ರನಾಮ, ಶ್ರೀ ದುರ್ಗಾಸಪ್ತಶತಿ, ಶ್ರೀ ಸೌಂದರ್ಯಲಹರಿ ಹಾಗೂ ಶ್ರೀ ವಿಷ್ಣುಸಹಸ್ರನಾಮದ ಪಠಣ ತಪ್ಪದೇ ನಡೆಯುತ್ತಿತ್ತು. ತುಮಕೂರಿನ ವಿವಿಧ ಭಾಗಗಳಲ್ಲಿದ್ದ ಮಹಿಳಾ ತಂಡಗಳು ಇಲ್ಲಿಗೆ ಬಂದು ದೇವಿಸ್ತುತಿಯನ್ನು ಮಾಡಿ ಹೋಗಿದ್ದಾರೆ. ಅಮ್ಮ ಶಾಂತಾ ದುರ್ಗಾದೇವಿ ಅವರು ಪ್ರತಿ ತಂಡದ ಜೊತೆ ಕುಳಿತು ದೇವಿಸ್ತುತಿ ಮಾಡಿದ್ದಾರೆ. ಅವರ ಜೊತೆ ದೇವಿಯ ಆರಾಧಕರಾದ ಎ. ರಘುರಾಮ ಶಾಸ್ತ್ರಿಗಳಿದ್ದು ವೇದಮಂತ್ರಗಳ ಮೂಲಕ ದೇವಿಯ ಆರಾಧನೆ ಮಾಡಿದ್ದಾರೆ. ಆಗ ದೇವಿಯ ಪೂಜಾ ಕಾರ್ಯವನ್ನು ನಾಗಭೂಷಣ ಶರ್ಮ ಅವರು ಮಾಡುತ್ತಿದ್ದರು.

ಶ್ರೀ ದುರ್ಗಾಂಬಿಕಾ ದೇವಿ ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಆವರಣಕ್ಕೆ ಬಂದ ತಕ್ಷಣ ಆಕೆಯನ್ನು ವೇದಘೋಷಗಳೊಡನೆ ಬರಮಾಡಿಕೊಳ್ಳಲಾಯಿತು. ನಂತರ 'ಜಲಾಧಿವಾಸ' 'ಧಾನ್ಯಾಧಿವಾಸ' 'ಪಂಚಾಗವ್ಯಾಧಿವಾಸ' 'ಕ್ಷೀರಾಧಿವಾಸ' 'ಪುಷ್ಪಾಧಿವಾಸ' ಹಾಗೂ 'ಶಯ್ಯಾಧಿವಾಸ' ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ಫೆಬ್ರುವರಿಯಲ್ಲಿ ಶ್ರೀ ದುರ್ಗಾಂಬಿಕಾ ದೇವಿಯ 'ನೇತ್ರೋನ್ಮಿಲನ' ಮತ್ತು 'ಪ್ರಾಣಪ್ರತಿಷ್ಠಾ' ಕಾರ್ಯಕ್ರಮಗಳು ಜರುಗಿದವು. ಕಳೆದ ಮೂರು ವರ್ಷಗಳಿಂದ ಶ್ರೀದೇವಿ ವಿದ್ಯಾಸಂಸ್ಥೆಯ ಆವರಣದಲ್ಲಿ ಪ್ರತಿಷ್ಠಾಪನೆಯಾಗಿರುವ ಶ್ರೀ ದುರ್ಗಾಂಬಿಕಾ ದೇವಿಯಿಂದಾಗಿ ಇಡೀ ಪರಿಸರಕ್ಕೆ ದೈವೀಕಳೆ ಬಂದಿದೆ. ಆಕೆಯ ಆಗಮನದಿಂದ ಈ ಪರಿಸರದಲ್ಲಿ ಗುಣಾತ್ಮಕವಾದ ಬೆಳವಣಿಗೆಯಾಗಿದೆ. ಯುವಜನಾಂಗ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಶ್ರೀ ದುರ್ಗಾಂಬಿಕಾ ದೇವಿಯ ಸಾನ್ನಿಧ್ಯವನ್ನು ಬಯಸಿ ಬರುತ್ತಿದ್ದಾರೆ. ತುಮಕೂರಿನ ವಿವಿಧ ಭಾಗಗಳಿಂದ ಜನ ಬಂದು ದೇವಿಯ ಆಶೀರ್ವಾದ ಪಡೆಯುತ್ತಿರುವುದು ಸಾಮಾನ್ಯ ದೃಶ್ಯವಾಗಿದೆ.

ಶ್ರೀ ದುರ್ಗಾಂಬಿಕಾ ದೇವಿಯು ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಆವರಣಕ್ಕೆ ಬಂದಾಗ ನಮ್ಮೊಡನೆ ಅನೇಕ ಹಿರಿಯಚೇತನಗಳಿದ್ದವು. ಈಗ ಅವು ನಮ್ಮೊಡನೆ ಇಲ್ಲ. ಕಮಲೇಶ ಅವರ ತಾಯಿ ಎಸ್.ಎನ್ ಸರೋಜಮ್ಮ ಮತ್ತು ರಮಣರ ಅಜ್ಜಿ, ಷಣ್ಮುಖಪ್ಪ ಅವರ ಮಡದಿ ಹನುಮಂತಮ್ಮ ಬಿಟ್ಟು ಹೋಗಿರುವ ದುಃಖವಿದೆ.

■ ನಿರೂಪಣೆ: ಎನ್.ಭಾರತಿ

## ಶ್ರೀದೇವಿ ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆಯ ವತಿಯಿಂದ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ

ತುಮಕೂರಿನಿಂದ ತೊಂಬತ್ತು ಕಿ.ಮೀ. ದೂರದಲ್ಲಿರುವ ಮತ್ತು ರಾಜ್ಯದ ಗಡಿ ಭಾಗವಾಗಿರುವ ಪಾವಗಡ ಶ್ರೀದೇವಿ ವೈದ್ಯಕೀಯ ಕಾಲೇಜು ವತಿಯಿಂದ ವಿದ್ಯಾರ್ಥಿಗಳಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಪಾವಗಡವು ಕರ್ನಾಟಕ ರಾಜ್ಯದಲ್ಲಿದ್ದರೂ ಆಂಧ್ರಪ್ರದೇಶದೊಂದಿಗೆ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಹಂಚಿಕೊಂಡಿದೆ. ಇಲ್ಲಿನ ಜನಬಳಕೆ ಮಾತು ತೆಲುಗು. ಪಾವಗಡವನ್ನು ಅತ್ಯಂತ ಹಿಂದುಳಿದ ತಾಲ್ಲೂಕು ಎಂದು ಡಾ. ಡಿ.ಎಂ. ನಂಜುಂಡಪ್ಪ ಸಮಿತಿ ತನ್ನ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದೆ. ಮಳೆ ಅತ್ಯಂತ ಕಡಿಮೆಯಿದ್ದು, ಶಾಶ್ವತ ಬರಗಾಲ ಪ್ರದೇಶವೆಂದು ಪರಿಗಣಿತವಾಗಿದೆ.

ಈ ತಾಲ್ಲೂಕಿನ ಜನ ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಗೆ ಜಿಲ್ಲಾ ಕೇಂದ್ರವಾಗಿರುವ ತುಮಕೂರಿಗೆ ಬರಬೇಕು. ಫ್ಲೋರೈಡ್‌ಯುಕ್ತ ನೀರನ್ನು ಸೇವಿಸುವುದರಿಂದ ಅನೇಕ ಆರೋಗ್ಯ ಸಮಸ್ಯೆಗಳನ್ನು ಇಲ್ಲಿನ ಜನ ಎದುರಿಸುತ್ತಿದ್ದಾರೆ. ಈ ದಿಸೆಯಲ್ಲಿ ಮಕ್ಕಳ ಆರೋಗ್ಯದ ವಿಚಾರದಲ್ಲಿ ಕಾಳಜಿ ವಹಿಸಿದ ಶ್ರೀದೇವಿ ವೈದ್ಯಕೀಯ ಸಂಸ್ಥೆ ಇಲ್ಲಿನ ಜ್ಞಾನಬೋಧಿನಿ ಶಾಲೆಯ ಒಂದು ಸಾವಿರ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಇದೊಂದು ಸಾಮಾನ್ಯ ಆರೋಗ್ಯ ತಪಾಸಣಾ ಶಿಬಿರವಾಗಿರುವ ಕಾರಣ ಮಕ್ಕಳಿಗೆ ಮತ್ತು ಅಧ್ಯಾಪಕರಿಗೆ ಎಲ್ಲಾ ವಿಧದ ತಪಾಸಣೆಯನ್ನು ಮಾಡಲಾಯಿತು. ಈ ಶಿಬಿರವನ್ನು ಏರ್ಪಡಿಸುವಲ್ಲಿ ಶ್ರೀದೇವಿ ವಿದ್ಯಾಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರಾದ ಎಂ.ಎಸ್. ಪಾಟೀಲ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ಶ್ರೀಮತಿ ಅಂಬಿಕಾ ಎಂ. ಹುಲಿನಾಯ್ಕರ್, ನರ್ಸಿಂಗ್ ಕಾಲೇಜಿನ ಸೂಪರಿಂಟೆಂಡೆಂಟ್ ನರಸಪ್ಪ, ಜ್ಞಾನಬೋಧಿನಿ ವಿದ್ಯಾಸಂಸ್ಥೆಯ ಕೆ.ಎಸ್. ರಾಮಕೃಷ್ಣಯ್ಯ ಹಾಗೂ ಡಾ. ಅನಿಲ್ ಕಾರಣಕರ್ತರಾಗಿದ್ದಾರೆ.



■ ಮಾಹಿತಿ: ನರಸಪ್ಪ



ಅರ್ಚನೆ


ಶಾಂತಾದುರ್ಗಾದೇವಿ ಹುಲಿನಾಯ್ಕರ್
ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ದುರ್ಗಾಂಬಿಕಾ ದೇವಸ್ಥಾನ

# ದಕ್ಷಿಣೇಶ್ವರದ ಶ್ರೀ ಕಾಳಿದೇವಿಯ ಸನ್ನಿಧಿ

**ಭಾರತದ ಕೆಲವು ರಾಜ್ಯಗಳು ತಮ್ಮಲ್ಲಿರುವ ದೇವರುಗಳಿಂದಾಗಿ ಪ್ರಸಿದ್ಧವಾಗಿವೆ. ಆಂಧ್ರಪ್ರದೇಶದ ತಿರುಪತಿಯ ಶ್ರೀ ವೆಂಕಟೇಶ್ವರಸ್ವಾಮಿ, ಕೇರಳದ ಅನಂತಪದ್ಮನಾಭ, ತಮಿಳುನಾಡಿನ ಕಂಚಿಯ ಕಾಮಾಕ್ಷಿ, ಕರ್ನಾಟಕದ ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ, ಮಹಾರಾಷ್ಟ್ರದ ಶಿರಡಿಯ ಶ್ರೀ ಸಾಯಿಬಾಬಾ ಹಾಗೆಯೇ ಪಶ್ಚಿಮ ಬಂಗಾಳದ ಕಲ್ಕತ್ತದ ದಕ್ಷಿಣೇಶ್ವರ ಶ್ರೀ ಕಾಳಿದೇವಿ, ಆಕೆಯ ಆರಾಧಕರಾದ ಶ್ರೀ ರಾಮಕೃಷ್ಣ ಪರಮಹಂಸರು ವಿಶ್ವದ ಎಲ್ಲೆಡೆ ಪ್ರಸಿದ್ಧರು. ಭಾರತದ ಅನೇಕ ರಾಜ್ಯಗಳ ಧಾರ್ಮಿಕ ಕೇಂದ್ರಗಳು ಆ ರಾಜ್ಯದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ.**








ನಮ್ಮ ಅಪ್ಪಾಜಿ ದೆಹಲಿಯ ಕೇಂದ್ರ ಸರ್ಕಾರದ ಹುದ್ದೆಯಲ್ಲಿದ್ದರು. ನಿಯೋಜನೆಯ ಮೇಲೆ ಅನೇಕ ಸಚಿವರ ಜೊತೆ ಕೆಲಸ ಮಾಡುತ್ತಿದ್ದರು. ಅವರು ಸಚಿವರ ಜೊತೆ ದೇಶದ ಎಲ್ಲಾ ರಾಜ್ಯಗಳಿಗೂ ಹೋಗುತ್ತಿದ್ದರು. ನಾವು ಮಾತ್ರ ದೆಹಲಿಯಲ್ಲಿ ಉಳಿದುಕೊಂಡಿದ್ದೆವು. ಉತ್ತರ ಭಾರತದ ಸಂಸ್ಕೃತಿ, ಭಾಷೆ, ಆಹಾರ ಪದ್ಧತಿ ಎಲ್ಲವೂ ನನಗೆ ಚಿರಪರಿಚಿತವಾಗಿದ್ದವು. ನನಗೆ ಬಾಲ್ಯದಿಂದಲೂ ಪಶ್ಚಿಮ ಬಂಗಾಳದಲ್ಲಿರುವ ಶ್ರೀ ಕಾಳಿದೇವಿಯನ್ನು ಕಾಣುವ ಬಯಕೆ. ಅಪ್ಪಾಜಿ ಪಶ್ಚಿಮ ಬಂಗಾಳಕ್ಕೆ ಅನೇಕ ಬಾರಿ ಹೋಗುತ್ತಿದ್ದರು. ಅವರನ್ನು ಕೇಳಲಿಲ್ಲ. ಮದುವೆಯಾಗಿ ನಲವತ್ತೈದು ವರ್ಷಗಳಾದರೂ ಆ ಬಯಕೆ ಈಡೇರುವ ಸಂದರ್ಭ ಬರಲಿಲ್ಲ. ನಮ್ಮ ಮೊದಲನೆಯ ಮಗಳು ಡಾ. ಭವಾನಿ ಸ್ಟಾಲಿನ್ "ಜನವರಿ 4ರಿಂದ ನಾಲ್ಕು ದಿನ ಕಲ್ಕತ್ತದಲ್ಲಿ ವೈದ್ಯಕೀಯ ಸಮಾವೇಶವಿದೆ, ನಾನು ಹೋಗುತ್ತಿದ್ದೇನೆ, ನನ್ನ ಕೊನೆಯ ಮಗಳು ಜಾಹ್ನವಿ ಬರುತ್ತಾಳೆ, ನೀನೂ ಬಾ" ಎಂದಳು. ಮಗಳು ಮತ್ತು ಮೊಮ್ಮಗಳೊಡನೆ ಶ್ರೀ ಕಾಳಿದೇವಿಯನ್ನು ಕಾಣಬೇಕು ಎಂದು ದೈವದ ಇಚ್ಛೆಯಾಗಿತ್ತೇನೋ! ಮರು ಮಾತನಾಡದೆ ಒಪ್ಪಿಕೊಂಡೆ.

ಭಾರತದ ಕೆಲವು ರಾಜ್ಯಗಳು ತಮ್ಮಲ್ಲಿರುವ ದೇವರುಗಳಿಂದಾಗಿ ಪ್ರಸಿದ್ಧವಾಗಿವೆ. ಆಂಧ್ರಪ್ರದೇಶದ ತಿರುಪತಿಯ ಶ್ರೀ ವೆಂಕಟೇಶ್ವರಸ್ವಾಮಿ, ಕೇರಳದ ಅನಂತಪದ್ಮನಾಭ, ತಮಿಳುನಾಡಿನ ಕಂಚಿಯ ಕಾಮಾಕ್ಷಿ, ಕರ್ನಾಟಕದ ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ, ಮಹಾರಾಷ್ಟ್ರದ ಶಿರಡಿಯ ಶ್ರೀ ಸಾಯಿಬಾಬಾ ಹಾಗೆಯೇ ಪಶ್ಚಿಮ ಬಂಗಾಳದ ಕಲ್ಕತ್ತದ ದಕ್ಷಿಣೇಶ್ವರ ಶ್ರೀ ಕಾಳಿದೇವಿ, ಆಕೆಯ ಆರಾಧಕರಾದ ಶ್ರೀ ರಾಮಕೃಷ್ಣ ಪರಮಹಂಸರು ವಿಶ್ವದ ಎಲ್ಲೆಡೆ ಪ್ರಸಿದ್ಧರು. ಭಾರತದ ಅನೇಕ ರಾಜ್ಯಗಳ ಧಾರ್ಮಿಕ ಕೇಂದ್ರಗಳು ಆ ರಾಜ್ಯದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ.

ಕಲ್ಕತ್ತದಿಂದ ಹನ್ನೆರಡು ಕಿ.ಮೀ. ದೂರದಲ್ಲಿರುವ ದಕ್ಷಿಣೇಶ್ವರದಲ್ಲಿ ಶ್ರೀ ಕಾಳಿದೇವಿ ನೆಲೆಸಿದ್ದಾಳೆ. ಆಕೆಯದು ಭಯಂಕರ ರೂಪ. ನಾಲಿಗೆಯನ್ನು ಹೊರಚಾಚಿದ್ದಾಳೆ. ಕೊರಳಿನಲ್ಲಿ ರುಂಡಮಾಲೆ ಧರಿಸಿದ್ದಾಳೆ. ಕೈಗಳಲ್ಲಿ ವಿವಿಧ ಆಯುಧಗಳಿವೆ. ಆಕೆಯ ಪಾದ ಶಿವನ ಎದೆಯ ಮೇಲಿದೆ. ಕಣ್ಣಿಗೆ ಅತ್ಯಂತ ಭಯಂಕರವಾಗಿ ಕಾಣುವ ಶ್ರೀ ಕಾಳಿದೇವಿಯ ಹೃದಯ ಅತ್ಯಂತ ಮಾರ್ದ್ರವ. ಆಕೆ ಕರುಣಾಮಯಿ. ದೇವಿಯನ್ನು ನೋಡುತ್ತಾ ನಿಂತರೆ ಆಕೆಯನ್ನು ನೋಡಲು ಪಟ್ಟ ಕಷ್ಟಗಳೆಲ್ಲಾ ಮಾಯವಾಗಿ ಮನಸ್ಸು ಆಹ್ಲಾದ ಅನುಭವಿಸುತ್ತದೆ.

ಕಾಲವನ್ನು ನಿಯಂತ್ರಿಸುವ ಕಾರಣದಿಂದ ಆಕೆಯನ್ನು 'ಕಾಳಿ' ಎನ್ನುತ್ತಾರೆ. ಆಕೆಯ ಬಣ್ಣ ಕಪ್ಪು. ಕಪ್ಪು ಸೃಷ್ಟಿಯ ರಹಸ್ಯದ ಸಂಕೇತ. ಇಡೀ ಪ್ರಕೃತಿಯ ಆಗುಹೋಗು ಆಕೆಯ ಹಿಡಿತದಲ್ಲಿದೆ. ನಿಗ್ರಹ–ಅನುಗ್ರಹ ಆಕೆಯ ಕೈಯಲ್ಲಿದೆ.



ದಕ್ಷಿಣೇಶ್ವರವು ಶ್ರೀ ಕಾಳಿದೇವಿ ತಾಯಿ ದುರ್ಗೆಯ 51 ಶಕ್ತಿಪೀಠಗಳಲ್ಲೊಂದು. ಅದು ಹೂಗ್ಲಿ ನದಿ ದಂಡೆಯ ಮೇಲಿದೆ. ಈ ದೇವಾಲಯ 25 ಎಕರೆ ವಿಸ್ತೀರ್ಣವನ್ನು ಹೊಂದಿದೆ. ಈ ಆವರಣದಲ್ಲಿ ವಿವಿಧ ದೇವರುಗಳಿಗೆ ಸಂಬಂಧಪಟ್ಟ 21 ದೇವರುಗಳ ದೇವಸ್ಥಾನವಿದೆ. ಈ ದೇವಾಲಯ ಪಶ್ಚಿಮ ಬಂಗಾಳದ ಶೈಲಿಯಲ್ಲಿದೆ. ಬಂಗಾಳದ ನವರತ್ನ ಸಂಸ್ಕೃತಿಯ ಆಧಾರದ ಮೇಲೆ ದೇವಾಲಯ ನಿರ್ಮಾಣವಾಗಿದೆ. ಈ ದೇವಾಲಯಕ್ಕೆ ಒಂಬತ್ತು ಗೋಪುರ ಮತ್ತು ಮೂರು ಅಂತಸ್ತಿನ ಮಹಡಿಯಿದೆ. ಈ ದೇವಾಲಯವನ್ನು ರಾಣಿ ರಸ್ಮೋಣಿ (Rani Roshmani) ನಿರ್ಮಿಸಿದ್ದಾರೆ. 31.5.1885 ರಲ್ಲಿ ಈ ದೇವಾಲಯದಲ್ಲಿ ಶ್ರೀ ಕಾಳಿದೇವಿಯನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಇಲ್ಲಿನ ಶ್ರೀ ಕಾಳಿದೇವಿಯನ್ನು 'ಭವತಾರಿಣಿ', 'ಶ್ರೀಜಗದೀಶ್ವರಿ' ಎಂದೆಲ್ಲಾ ಕರೆಯುತ್ತಾರೆ. ಭವತಾರಿಣಿ ಎಂದರೆ ಭವದ ಕಷ್ಟವನ್ನು ಪರಿಹರಿಸುವವಳು ಎಂದರ್ಥ. ಈ ದೇವಾಲಯ ನಿರ್ಮಾಣಕ್ಕೆ ಆ ಕಾಲದಲ್ಲಿ ಒಂಬತ್ತು ಲಕ್ಷ ರೂ.ಗಳು ಖರ್ಚು ಆಗಿದೆ. ಇಲ್ಲಿ ಶಿವದೇವಾಲಯ ಮತ್ತು ಶ್ರೀ ರಾಧಾಕೃಷ್ಣ ದೇವಾಲಯಗಳಿವೆ. ದೇವಿಯ ದೇವಾಲಯ ನಿರ್ಮಾಣಕ್ಕೆ ಸಂಬಂಧಪಟ್ಟ ಕತೆಯೊಂದಿದೆ. ರಾಣಿ ರಸ್ಮೋಣಿ ತನ್ನ ಬಂಧುಮಿತ್ರರ ಜೊತೆ ಕಾಶಿಗೆ ಹೋಗಲು ನಿರ್ಧಾರ ಮಾಡುತ್ತಾರೆ. ಆ ರಾತ್ರಿಯೇ ಶ್ರೀ ಕಾಳಿದೇವಿ ಅವರ ಕನಸಿನಲ್ಲಿ ಕಾಣಿಸಿಕೊಂಡು 'ನೀನು ಕಾಶಿಗೆ ಹೋಗುವ ಅಗತ್ಯವಿಲ್ಲ. ನಾನು ಇಲ್ಲಿದ್ದೇನೆ, ನನಗೊಂದು ದೇವಾಲಯ ಕಟ್ಟಿಸು' ಎಂದು ಅಪ್ಪಣೆ ಕೊಡುತ್ತಾಳೆ. ದೇವಿಯ ಆದೇಶದಂತೆ ಈಗ ಆ ಜಾಗದಲ್ಲಿ ರಾಣಿ ರಸ್ಮೋಣಿಯವರು ದೇವಾಲಯವನ್ನು ನಿರ್ಮಾಣ ಮಾಡಿದ್ದಾರೆ. ಈ ದೇವಾಲಯ ನಿರ್ಮಾಣವಾದ ಐದು ವರ್ಷದ ನಂತರ ಆಕೆ ಇಹಲೋಕ ತ್ಯಜಿಸುತ್ತಾರೆ.



ದಕ್ಷಿಣೇಶ್ವರ ಶ್ರೀ ಕಾಳಿದೇವಿಯನ್ನು ಕಂಡ ಕೂಡಲೇ ನೆನಪಿಗೆ ಬರುವ ಮತ್ತೊಬ್ಬ ಮಹಾಪುರುಷರು ಪೂಜ್ಯ ಶ್ರೀ ರಾಮಕೃಷ್ಣ ಪರಮಹಂಸರು. ದಕ್ಷಿಣೇಶ್ವರ ಕಾಳಿಯನ್ನು ಜಗತ್ಪ್ರಸಿದ್ಧ ಮಾಡಿದ ಕೀರ್ತಿ ರಾಮಕೃಷ್ಣ ಪರಮಹಂಸರಿಗೆ ಸಲ್ಲುತ್ತದೆ. ಶ್ರೀ ರಾಮಕೃಷ್ಣ ಪರಮಹಂಸರು ಜಗತ್ತಿಗೆ ನೀಡಿದ ಮತ್ತೊಂದು ಅಮೂಲ್ಯ ಕಾಣಿಕೆ ಶ್ರೀ ಸ್ವಾಮಿ ವಿವೇಕಾನಂದರು. ಆ ಮಹಾಚೇತನವನ್ನು ಇಲ್ಲೇ ಶ್ರೀ ರಾಮಕೃಷ್ಣ ಪರಮಹಂಸರು ಸಿದ್ಧಮಾಡಿದ್ದು. ಶ್ರೀ ರಾಮಕೃಷ್ಣ ಪರಮಹಂಸರು 1836ರ ಫೆಬ್ರುವರಿ 16ರಂದು ಜನಿಸುತ್ತಾರೆ. 1886ರ ಆಗಸ್ಟ್ 16ರಂದು ನಿಧನರಾಗುತ್ತಾರೆ.

ತಮ್ಮ ಅಣ್ಣ ರಾಮಕುಮಾರ ಚಟ್ಟೋಪಾಧ್ಯಾಯರ ನಂತರ ಶ್ರೀ ಕಾಳಿದೇವಿಯ ಪೂಜೆಯ ಜವಾಬ್ದಾರಿ ಶ್ರೀ ರಾಮಕೃಷ್ಣ ಪರಮಹಂಸರ ಮೇಲೆ ಬೀಳುತ್ತದೆ. ಶ್ರೀ ರಾಮಕೃಷ್ಣ ಪರಮಹಂಸರು ಎಲ್ಲಾ ಸ್ತ್ರೀಯಲ್ಲೂ ಶ್ರೀ ಕಾಳಿಮಾತೆಯನ್ನೇ ಕಾಣುತ್ತಾರೆ. ಅದಕ್ಕಾಗಿ ತಮ್ಮ ಮಡದಿ ಶ್ರೀ ಶಾರದಾದೇವಿಯನ್ನೇ ಅವರು ಪೂಜಿಸುತ್ತಾರೆ. ಶ್ರೀ ಶಾರದಾಮಾತೆ ಸಹ ಪರಮಹಂಸರಿಗೆ ಅನುರೂಪರಾದ ಮಡದಿ. ಜೀವನಪರ್ಯಂತ ಇಬ್ಬರೂ ಬ್ರಹ್ಮಚಾರಿಗಳಾಗಿ ಜಗತ್ತಿಗೆ ಬಹುದೊಡ್ಡ ಅಧ್ಯಾತ್ಮವನ್ನು ಬೋಧಿಸಿದ ಋಷಿ ದಂಪತಿ.

ಶ್ರೀ ರಾಮಕೃಷ್ಣ ಪರಮಹಂಸರಿಗೆ ಸಾಕ್ಷಾತ್ ರೂಪದಲ್ಲಿ ಶ್ರೀ ಕಾಳಿಯನ್ನು ನೋಡುವ ಮನಸ್ಸು ಆಗುತ್ತದೆ. ದೇವಿಯನ್ನು ವಿವಿಧ ರೂಪದಲ್ಲಿ ಆರಾಧಿಸುತ್ತಾರೆ. ಧ್ಯಾನ ಮಾಡುತ್ತಾರೆ. ದೇವಿ ಕಾಣಿಸುವುದಿಲ್ಲ. ಇದರಿಂದ ಬೇಸರಗೊಂಡ ಪರಮಹಂಸರು ದೇವಿಯ ಗರ್ಭಗುಡಿಗೆ ಹೋಗಿ ಕತ್ತಿಯಿಂದ ತಮ್ಮ ರುಂಡವನ್ನು ಕತ್ತರಿಸಿಕೊಳ್ಳಲು ಮುಂದಾಗುತ್ತಾರೆ. ಅವರ ಕಠೋರ ಭಕ್ತಿಗೆ ಮೆಚ್ಚಿ ಶ್ರೀ ಕಾಳಿ ಪ್ರತ್ಯಕ್ಷಳಾಗುತ್ತಾಳೆ. ಹಿಂದೆ ಓದಿದ್ದ ಈ ಕತೆ ಶ್ರೀ ಕಾಳಿಯ ಮುಂದೆ ನಿಂತಾಗ ನೆನಪಿಗೆ ಬಂತು. ಈಗ ಆಕೆಯ ಮುಂದೆ ಕೈಮುಗಿದು ನಿಂತ 'ನನ್ನ ಅದೃಷ್ಟ ಎಂತಹುದು' ಎಂದು ಮನಸ್ಸು ನುಡಿಯಿತು. 'ಇದೆಲ್ಲಾ ದೇವಿ ಕೃಪೆಯೇ ಹೊರತು ನನ್ನದು ಏನೂ ಇಲ್ಲ' ಎಂದು ಪ್ರಜ್ಞೆ ಹೇಳಿತು. ಶ್ರೀ ರಾಮಕೃಷ್ಣ ಪರಮಹಂಸರಿಗೆ ಸಂಬಂಧಪಟ್ಟ ವಸ್ತುಗಳನ್ನು ಸಂಗ್ರಹಿಸಿ, ಅಚ್ಚುಕಟ್ಟಾಗಿ ಜೋಡಿಸಿ ಇಟ್ಟಿದ್ದಾರೆ. ಅದನ್ನು ನೋಡಿದೆವು.

ದಕ್ಷಿಣೇಶ್ವರದಲ್ಲಿ ನೂರು ವರ್ಷಕ್ಕೂ ಹೆಚ್ಚಿನ ಆಯಸ್ಸಿರುವ ಆಲದ ಮರವೊಂದಿದೆ. ಅಲ್ಲಿಗೆ ಹೋದವರು ಶಿವ ದೇವಾಲಯ ಮತ್ತು ರಾಧಾಕೃಷ್ಣ ದೇವಾಲಯಗಳನ್ನು ನೋಡಿಯೇ ನೋಡುತ್ತಾರೆ.

ದಕ್ಷಿಣೇಶ್ವರ ಶ್ರೀ ಕಾಳಿದೇವಿಯನ್ನು ನೋಡುತ್ತಾ ಕುಳಿತರೆ ನೀವು ಮಗುವಾಗುತ್ತೀರಿ. ಆಕೆ ನಿಮ್ಮನ್ನು ತಾಯಿಯಂತೆ ಪ್ರೀತಿಸಿ, ಮುದ್ದಿಸಿ ಆಶೀರ್ವಾದ ಮಾಡುತ್ತಾಳೆ. ಜಗತ್ತು ರಕ್ಷಿಸುವ ದೇವಿಯನ್ನು ನೋಡುವುದು, ನೆನೆಯುವುದು ಬದುಕಿನಲ್ಲಿ ದೊರೆತ ಮಹಾಭಾಗ್ಯ.

■ ನಿರೂಪಣೆ: **ಎನ್.ಭಾರತಿ**

Printed and Published by **Shridevi Media Center,** Lingapura, NH 4, Sira Road, Tumakuru - 572106,, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Ambika M Hulinaykar**